# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:07.10.2023

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008

ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮೃತಂ ಃ

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/63/2023–24/2558** **ದಿನಾಂಕ:16.10.2023**

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

**ವಿಷಯ : ದಿನಾಂಕ:07.10.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:07.10.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:07.10.2023ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಕು. ಗೀತಾ ಜಿ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
3. ಶ್ರೀಮತಿ ಶಾರದಾ ಪಾಟೀಲ, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ, ಡೀನರು, ಕಲಾ ನಿಕಾಯ : ಸದಸ್ಯರು
5. ಪ್ರೊ. ಮಹಾಬಲೇಶ್ವರ ಯು.ಎಸ್., ಪ್ರಾಧ್ಯಾಪಕರು : ಸದಸ್ಯರು
6. ಡಾ. ರವಿ ಟಿ.ಎಸ್., ಪ್ರಾಚಾರ್ಯರು : ಸದಸ್ಯರು
7. ಡಾ. ನಾಗರಾಜ ಜಿ.ಯು., ಪ್ರಾಚಾರ್ಯರು : ಸದಸ್ಯರು
8. ಡಾ. ದಾಸಯ್ಯ ಜಿ., ಪ್ರಾಚಾರ್ಯರು : ಸದಸ್ಯರು
9. ಡಾ. ಪ್ರೇಮ ಪಿ.ಎಂ., ಪ್ರಾಚಾರ್ಯರು : ಸದಸ್ಯರು
10. ಪ್ರೊ. ಶಿವಶಂಕರ್ ಕೆ., ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
11. ಪ್ರೊ. ಸರೋಜ ಬಿ.ಬಿ., ಕುಲಸಚಿವರು : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 8ಕ್ಕಿಂತ ಹೆಚ್ಚು ಅಂದರೆ 11 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ನಂತರ, ನೂತನವಾಗಿ ಡೀನರ ವರ್ಗದಿಂದ ಸಿಂಡಿಕೇಟ್‌ಗೆ ನಾಮನಿರ್ದೇಶಿತರಾದ ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ, ಡೀನರು, ಕಲಾ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು ಅಭಿನಂದಿಸಿ ಸ್ವಾಗತಿಸಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(10/23) |

**-:ಟಿಪ್ಪಣಿ:-**

**ವಿಷಯ: ದಿನಾಂಕ:31.07.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:31.07.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:05.08.2023 ರಂದು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳ ಕುರಿತು ಇದುವರೆಗೂ ಯಾವುದೇ ಆಕ್ಷೇಪಣೆಗಳು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:07.10.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:31.07.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ಸದರಿ ನಡಾವಳಿಗಳ ವಿಷಯ ಸಂಖ್ಯೆ:06(e)/(07/23) (ಪುಟಸಂಖ್ಯೆ:34) ಕ್ಕೆ ಸಂಬಂಧಿಸಿದಂತೆ ಪರಿಸರ ವಿಜ್ಞಾನ ಹಾಗೂ ಎಂ.ಸಿ.ಎ. ವಿಭಾಗದ Class Room ನ್ನು ನಿರ್ಮಿಸಲು KRIDL Davnagere ಇವರಿಗೆ ಮುಂಗಡ ಠೇವಣಿ ವಂತಿಕೆ ಆಧಾರದ ಮೇಲೆ ಕಾಮಗಾರಿ ಕೈಗೊಳ್ಳಲು ನಿರ್ಣಯಿಸಿತು. ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(a)/(10/23) |

# -: ಟಿಪ್ಪಣಿ :-

**ವಿಷಯ: ಸರ್ಕಾರದ ನಿರ್ದೇಶಾನುಸಾರ ವಿಶ್ವವಿದ್ಯಾನಿಲಯದ ಉಪಕುಲಸಚಿವರ ಹುದ್ದೆಯ ವೇತನ ಶ್ರೇಣಿಯನ್ನು ಪರಿಷ್ಕರಿಸಿರುವ ಹಾಗೂ ಕಟಾವಣೆ ಮಾಡುವ ಕುರಿತು.**

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ಇಡಿ/86/ಯುಎನ್‌ಇ/2023, ದಿನಾಂಕ: 21.06.2023.
2. ವಿ.ವಿ. ಆದೇಶ ಸಂಖ್ಯೆ: ದಾವಿವಿ/ಮಾಸನಿ/19/2023-24/1794, ದಿನಾಂಕ: 24.08.2023
3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ: 29.09.2023.

*********

ಸರ್ಕಾರದ ಉಲ್ಲೇಖ (1)ರ ಪತ್ರದನುಸಾರ ಉಲ್ಲೇಖ (2)ರಲ್ಲಿ ವಿಶ್ವವಿದ್ಯಾನಿಲಯದ ಉಪಕುಲಸಚಿವರ ಹುದ್ದೆಯ ವೇತನ ಶ್ರೇಣಿಯನ್ನು ರೂ.74,400-1,09,600/-ಗಳಿಂದ ರೂ.67,550-1,04,600/-ಗಳಿಗೆ ಪುನರ್ ನಿಗದಿಪಡಿಸಿ ಆದೇಶಿಸಲಾಗಿದೆ. ಸದರಿ ಆದೇಶದಂತೆ ವಿಶ್ವವಿದ್ಯಾನಿಲಯದ ಈ ಕೆಳಕಂಡ ಉಪಕುಲಸಚಿವರ ವೇತನ ನಿಗಧೀಕರಣ ಮಾಡಲಾಗಿದ್ದು, ಸದರಿಯವರ ವೇತನದಲ್ಲಿ ಈಗಾಗಲೇ ಹೆಚ್ಚುವರಿ ಪಾವತಿಸಲಾಗಿರುವ ಮೊತ್ತವನ್ನು ಕಟಾವಣೆ ಮಾಡುವ ಬಗ್ಗೆ ಹಾಗೂ ಈಗಾಗಲೇ ವೇತನ ಶ್ರೇಣಿಯನ್ನು ಪರಿಷ್ಕರಿಸಿರುವುದಕ್ಕೆ ಘಟನೋತ್ತರ ಅನುಮೋದನೆಗಾಗಿ ದಿನಾಂಕ:07.10.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

| ಕ್ರ.ಸಂ. | ಹೆಸರು | ವಿಭಾಗ |
|---|---|---|
| 01 | ಶ್ರೀ ಡಿ.ಎನ್. ಪ್ರಕಾಶ | ಕುಲಪತಿಗಳ ಆಪ್ತಕಾರ್ಯಾಲಯ |
| 02 | ಶ್ರೀಮತಿ ಉಮಾದೇವಿ ವಿ. | ಪರೀಕ್ಷಾಂಗ |
| 03 | ಶ್ರೀ ಕೆ.ಎಸ್. ಮಲ್ಲಿಕಾರ್ಜುನ | ನಿವೃತ್ತ |
| 04 | ಶ್ರೀ ಆರ್. ಶಾಂತಕುಮಾರ | ಹಣಕಾಸು |
| 05 | ಶ್ರೀಮತಿ ಸುಜಾತ ಎಂ.ಜಿ. | ಆಡಳಿತ |

**<u>ನಿರ್ಣಯ</u>**

ಸರ್ಕಾರದ ಆದೇಶಾನುಸಾರ ವಿಶ್ವವಿದ್ಯಾನಿಲಯದ ಈ ಮೇಲ್ಕಂಡ 05 ಉಪಕುಲಸಚಿವರ ವೇತನ ಶ್ರೇಣಿಯನ್ನು ರೂ.74,400-1,09,600/-ಗಳಿಂದ ರೂ.67,550-1,04,600/-ಗಳಿಗೆ ಪುನರ್ ನಿಗದಿಪಡಿಸಿ ಆದೇಶಿಸಲಾಗಿರುವ ಹಿನ್ನಲೆಯಲ್ಲಿ ಸದರಿಯವರುಗಳ ವೇತನದಲ್ಲಿ ಈಗಾಗಲೇ ಹೆಚ್ಚುವರಿ ಪಾವತಿಸಲಾಗಿರುವ ಮೊತ್ತವನ್ನು ಸಮಾನ 20 ಕಂತುಗಳಲ್ಲಿ ಕಟಾವಣೆ ಮಾಡಿ ಮಾಹಿತಿಯನ್ನು ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿ ಅನುಮೋದಿಸಿತು.

ಕುಲಸಚಿವರು        ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(b)/(10/23) |

## -: ಟಿಪ್ಪಣಿ :-

**ವಿಷಯ: ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಹೆಚ್ಚುವರಿ ಪಾವತಿಸಿದ ಬಾಕಿ ಮೊತ್ತವನ್ನು ಕಟಾಯಿಸುವ ಕುರಿತು.**

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಇಡಿ 483 ಯುಎನ್ಇ 2017, ದಿನಾಂಕ: 11.08.2020

2. ವಿ.ವಿ. ಸುತ್ತೋಲೆ ಸಂಖ್ಯೆ: ದಾವಿವಿ/ಮಾಸನಿ/745/2023-24/532, ದಿನಾಂಕ: 19.05.2023

3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:29.09.2023.

*********

ಸರ್ಕಾರದ ಉಲ್ಲೇಖ (1)ರ ಪತ್ರದಲ್ಲಿ 7ನೇ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯ ವ್ಯತ್ಯಾಸದ ಮೊತ್ತವನ್ನು ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳಿಗೆ ಪಾವತಿಸುವ ಸಂದರ್ಭದಲ್ಲಿ ಶೇಕಡ 125 ರಷ್ಟು ತುಟ್ಟಿ ಭತ್ಯೆಯನ್ನು ಪಾತಿಸಿರುವುದು ಕಂಡು ಬಂದಿರುವುದರಿಂದ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಸಂಬಂಧಪಟ್ಟ ಬೋಧಕ ಸಿಬ್ಬಂದಿಗಳಿಂದ ಕೂಡಲೇ ಹಿಂಪಡೆಯಲು ಆದೇಶಿಸಿರುತ್ತಾರೆ. ತತ್ಸಂಬಂಧ, ಸರ್ಕಾರದ ನಿರ್ದೇಶನದಂತೆ ಮಾನ್ಯ ಕುಲಪತಿಗಳ ಆದೇಶಾನುಸಾರ ಸಂಬಂಧಪಟ್ಟ ಅಧ್ಯಾಪಕರುಗಳಿಗೆ ಅವರ ವೇತನದಲ್ಲಿ 10 ಕಂತುಗಳಲ್ಲಿ ಕಟಾವಣೆ ಮಾಡಬೇಕಾಗಿರುವ ಬಗ್ಗೆ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಮುಂದುವರೆದು, ಸದರಿ ಅಧ್ಯಾಪಕರುಗಳ ವೇತನದಲ್ಲಿ ಕಟಾವಣೆ ಮಾಡುವ ಕುರಿತು ದಿನಾಂಕ:07.10.2023ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### <u>ನಿರ್ಣಯ</u>

ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ/ ಕಾರ್ಯನಿರ್ವಹಿಸುತಿದ್ದ ಶಾಸನಬದ್ಧ ಅಧಿಕಾರಿಗಳು/ ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ 7ನೇ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯ ವ್ಯತ್ಯಾಸದ ಮೊತ್ತವನ್ನು ಪಾವತಿಸುವ ಸಂದರ್ಭದಲ್ಲಿ ಶೇಕಡ 125 ರಷ್ಟು ತುಟ್ಟಿ ಭತ್ಯೆಯನ್ನು ಹಾಗೂ ಹೆಚ್ಚಿನ ಮೊತ್ತ ಪಾತಿಸಿರುವುದು ಕಂಡುಬಂದಿರುವುದರಿಂದ ಈ ಕೆಳಕಂಡವರುಗಳಿಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಕೂಡಲೇ ಹಿಂಪಡೆಯಲು ಸರ್ಕಾರ ಆದೇಶಿಸಿರುವ ಹಿನ್ನಲೆಯಲ್ಲಿ ಸದರಿಯವರುಗಳ ವೇತನದಲ್ಲಿ ಈಗಾಗಲೇ ಹೆಚ್ಚುವರಿ ಪಾವತಿಸಲಾಗಿರುವ ಮೊತ್ತವನ್ನು ಕುರಿತು ಪರಿಶೀಲಿಸಿ ಸಮಾನ 10 ಕಂತುಗಳಲ್ಲಿ ಕಟಾವಣೆ ಮಾಡಿ ಮಾಹಿತಿಯನ್ನು ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.02(c)/(10/23) |

## –ಃಟಿಪ್ಪಣಿಃ–

ವಿಷಯಃ **ಡಾ. ಸುಚಿತ್ರ ಎಸ್, ಪ್ರಾಧ್ಯಾಪಕರು – ಇವರ ವೃತ್ತಿ ಪದೋನ್ನತಿಗೆ ನಿಗದಿಪಡಿಸಿದ ಅರ್ಹತಾ ದಿನಾಂಕವನ್ನು ಪರಿಷ್ಕರಿಸುವ ಕುರಿತು.**

ಉಲ್ಲೇಖಃ
1. ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ31.07.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
2. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃದಾವಿವಿ/ಮಾಸನಿ/34/2023–24/1602, ದಿನಾಂಕಃ 08.08.2023
3. ಸಮಿತಿ ಸಭೆಯ ನಡಾವಳಿ ಸಂಖ್ಯೆಃ ದಾವಿವಿ/ಮಾಸನಿ/34/2023–24, ದಿನಾಂಕಃ 20.09.2023.
4. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ 29.09.2023.

*********

ಡಾ. ಸುಚಿತ್ರ ಎಸ್. ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ಯು.ಜಿ.ಸಿ. ಸಿ.ಎ.ಎಸ್. ಯೋಜನೆಯಡಿ ಪ್ರಾಧ್ಯಾಪಕ ಹುದ್ದೆಗೆ ನಿಗದಿಪಡಿಸಿದ ಅರ್ಹತಾ ದಿನಾಂಕವನ್ನು ಪರಿಷ್ಕರಿಸುವ ಸಂಬಂಧ ದಿನಾಂಕ:31.07.2023ರ ಸಿಂಡಿಕೇಟ್ ಸಭೆಯಲ್ಲಿ 02 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸುವಂತೆ ನಿರ್ಣಯಿಸಲಾಗಿದ್ದರಿಂದ ಉಲ್ಲೇಖ (2)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಸಮಿತಿಯನ್ನು ರಚಿಸಲಾಗಿತ್ತು.

ಸದರಿ ಸಮಿತಿಯು ದಿನಾಂಕಃ25.08.2023ರಂದು ಸಭೆಯನ್ನು ನಡೆಸಿ, ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಯನ್ನು ಉಲ್ಲೇಖ (3)ರಲ್ಲಿ ಸಲ್ಲಿಸಿರುತ್ತಾರೆ. ಆದ್ದರಿಂದ, ಸದರಿ ನಡಾವಳಿಗಳನ್ನು ದಿನಾಂಕಃ07.10.2023ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ದಿನಾಂಕ:31.07.2023ರ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ 02 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕಃ25.08.2023ರಂದು ಸಭೆ ನಡೆಸಿ ಡಾ. ಸುಚಿತ್ರ ಎಸ್., ಇವರು ದಿನಾಂಕ:07.12.2018 ರಂದು ಪಿಹೆಚ್.ಡಿ ಪದವಿಯನ್ನು ಪಡೆದುಕೊಂಡಿರುವುದರಿಂದ ಹಾಗೂ ಯು.ಜಿ.ಸಿ. ನಿಯಮಾವಳಿ 2010ರ ಪ್ರಕಾರ ಇವರಿಗೆ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲು ನಿರ್ಣಯಿಸಿರುವ ನಡಾವಳಿಯನ್ನು ಸಭೆಯು ಕೂಲಂಕುಶವಾಗಿ ಪರಿಶೀಲಿಸಿ ಸುದೀರ್ಘ ಚರ್ಚೆಯ ನಂತರ ಸದರಿಯವರಿಗೆ ದಿನಾಂಕ:07.12.2018ರಿಂದ ಅನ್ವಯವಾಗುವಂತೆ ಪ್ರಾಧ್ಯಾಪಕರ ಹುದ್ದೆಗೆ ವೃತ್ತಿ ಪದೋನ್ನತಿ ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಮುಂದುವರೆದು, ಸದರಿಯವರ ವೇತನ ವ್ಯತ್ಯಾಸದ ಮೊತ್ತಕ್ಕೆ ಸಂಬಂಧಿಸಿದ ಅನುದಾನಕ್ಕಾಗಿ ಸರ್ಕಾರಕ್ಕೆ ಪತ್ರಿಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(d)/(10/23) |

## –:ಟಿಪ್ಪಣಿ:–

**ವಿಷಯಃ ಎಂ.ಸಿ.ಎ. ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ.**

ಉಲ್ಲೇಖಃ 1. ವಿ.ವಿ. ಅಧಿಸೂಚನೆ ಸಂಖ್ಯೆ:ದಾವಿ/ಶೈಕ್ಷಣಿಕ/174/202324/2019, ದಿನಾಂಕಃ13.09.2023

2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ29.09.2023.

*********

ವಿಶ್ವವಿದ್ಯಾನಿಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಸ್ನಾತಕೋತ್ತರ ಎಂ.ಸಿ.ಎ. ಅಧ್ಯಯನ ವಿಭಾಗವನ್ನು ಪ್ರಾರಂಭಿಸಲಾಗುತ್ತಿದ್ದು, ಎಂ.ಸಿ.ಎ. ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸಲು ಉಲ್ಲೇಖ (1)ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಇಬ್ಬರು ಸಹ ಪ್ರಾಧ್ಯಾಪಕರುಗಳಿದ್ದು, ಅದರಲ್ಲಿ ಡಾ. ಚಂದ್ರಕಾಂತ ನಾಯ್ಕೋಡಿ – ಇವರನ್ನು ಗಣಕ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಮುಂದುವರೆದು, ಡಾ. ಬಸವಣ್ಣ ಎಂ., ಇವರನ್ನು ಹೊಸದಾಗಿ ಪ್ರಾರಂಭವಾಗಲಿರುವ ಎಂ.ಸಿ.ಎ. ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡುವ ಬಗ್ಗೆ ದಿನಾಂಕಃ07.10.2023ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ 2023–24ನೇ ಸಾಲಿನಿಂದ ಹೊಸದಾಗಿ ಪ್ರಾರಂಭವಾಗಲಿರುವ ಎಂ.ಸಿ.ಎ. ಅಧ್ಯಯನ ವಿಭಾಗಕ್ಕೆ AICTE ನಿಯಮಾನುಸಾರ ಒಬ್ಬ ಅಧ್ಯಕ್ಷರನ್ನು ನೇಮಕ ಮಾಡಬೇಕಾಗಿರುವುದರಿಂದ, ಡಾ. ಬಸವಣ್ಣ ಎಂ., ಸಹ ಪ್ರಾಧ್ಯಾಪಕರು, ಗಣಕಯಂತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು 02 ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(e)/(10/23) |

## –:ಟಿಪ್ಪಣಿ:–

**ವಿಷಯ:** **ಶ್ರೀ ಪ್ರಶಾಂತ ವಿ, ಹಂಗಾಮಿ ಕಿರಿಯ ಸಹಾಯಕರು – ಇವರ ಹಂಗಾಮಿ ನೇಮಕಾತಿ ಕುರಿತು.**

ಉಲ್ಲೇಖ:
1. ದಿನಾಂಕ:17.08.2019ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
2. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ:ದಾವಿವಿ/ಮಾಸನಿ/2/35/2021–22/6846, ದಿನಾಂಕ:23.03.2022
3. ದಿನಾಂಕ:25.01.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
4. ವಿ.ವಿ. ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ದಾವಿವಿ/ಮಾಸನಿ/35/2022–23/4476, ದಿನಾಂಕ: 06.02.2023
5. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ: ದಾವಿವಿ/ಮಾಸನಿ/35/2023–24/2005, ದಿನಾಂಕ:06.09.2023
6. ಶ್ರೀ ಪ್ರಶಾಂತ ವಿ, ಹಂಗಾಮಿ ಕಿರಿಯ ಸಹಾಯಕರು – ಇವರ ಮನವಿ ದಿನಾಂಕ:22.09.2023
7. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ: 29.09.2023.

*********

1. ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:17.08.2019ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಉಲ್ಲೇಖ (2) ರಲ್ಲಿ ಶ್ರೀ ಪ್ರಶಾಂತ ವಿ, ಹಂಗಾಮಿ ಕಿರಿಯ ಸಹಾಯಕರು – ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಿಕರಣಗೊಳಿಸಲಾಗಿತ್ತು.
2. ಆದರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:25.01.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಉಲ್ಲೇಖ (4)ರಲ್ಲಿ ಶ್ರೀ ಪ್ರಶಾಂತ ವಿ. ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಿಕರಣಗೊಳಿಸಿರುವ ಅಧಿಕೃತ ಜ್ಞಾಪನ ಪತ್ರವನ್ನು ಹಿಂಪಡೆಯಲಾಗಿದೆ.
3. ನಂತರ ಉಲ್ಲೇಖ (5)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಶ್ರೀ ಪ್ರಶಾಂತ ವಿ, ಹಂಗಾಮಿ ಕಿರಿಯ ಸಹಾಯಕರು – ಇವರನ್ನು ದಿನಾಂಕ:01.08.2023ರಿಂದ ಅನ್ವಯವಾಗುವಂತೆ 06 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮುಚ್ಚಳಿಕೆ ಪತ್ರ ನೀಡುವ ಷರತ್ತಿಗೊಳಪಟ್ಟು ತಾತ್ಕಾಲಿಕವಾಗಿ ಹಂಗಾಮಿ ಕಿರಿಯ ಸಹಾಯಕರಾಗಿ ನೇಮಕಾತಿ ಮಾಡಲಾಗಿತ್ತು.
4. ಉಲ್ಲೇಖ (5)ರ ಪತ್ರದಲ್ಲಿ ಶ್ರೀ ಪ್ರಶಾಂತ ವಿ, ಹಂಗಾಮಿ ಕಿರಿಯ ಸಹಾಯಕರು – ಇವರು ಮುಚ್ಚಳಿಕೆ ಪತ್ರ ಬರೆದುಕೊಡಲು ಕಾಲಾವಕಾಶವನ್ನು ನೀಡುತ್ತಾ, ವೇತನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಸದರಿಯವರಿಂದ ಮುಚ್ಚಳಿಕೆ ಪತ್ರ ಪಡೆಯದೇ ವೇತನ ಬಿಡುಗಡೆ ಮಾಡುವ ಬಗ್ಗೆ ದಿನಾಂಕ:07.10.2023ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ಶ್ರೀ ಪ್ರಶಾಂತ ವಿ, ಹಂಗಾಮಿ ಕಿರಿಯ ಸಹಾಯಕರು – ಇವರು ಮುಚ್ಚಳಿಕೆ ಪತ್ರವನ್ನು ಸಲ್ಲಿಸಿದರೆ ಮಾತ್ರ ವೇತನ ಬಿಡುಗಡೆ ಮಾಡಲು ಸಭೆಯು ನಿರ್ಣಯಿಸಿತು. ಮುಂದುವರೆದು, ವಿಶ್ವವಿದ್ಯಾನಿಲಯವು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳನ್ನು ಸದರಿಯವರು ಪಾಲನೆ ಮಾಡಬೇಕು ಹಾಗೂ ಸಿಂಡಿಕೇಟ್ ಮತ್ತು ಆಡಳಿತ ಮಂಡಳಿ ತೆಗೆದುಕೊಳ್ಳುವ ನಿರ್ಣಯಕ್ಕೆ ಬದ್ಧರಾಗಿರಬೇಕೆಂದು ಸದರಿಯವರಿಂದ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯಲು ಸಭೆಯು ನಿರ್ಣಯಿಸಿತು.

ಕುಲಸಚಿವರು | ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(f)/(10/23) |

**–ಃಟಿಪ್ಪಣಿಃ–**

ವಿಷಯಃ **ಶ್ರೀ ಶೋಭ್ಯಾನಾಯ್ಕ ಹೆಚ್, ಹಂಗಾಮಿ ಕಿರಿಯ ಸಹಾಯಕರು – ಇವರ ಹಂಗಾಮಿ ನೇಮಕಾತಿ ಕುರಿತು.**

ಉಲ್ಲೇಖಃ
1. ದಿನಾಂಕಃ17.08.2019ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
2. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/2/34/2021–22/6845, ದಿನಾಂಕಃ 23.03.2022
3. ದಿನಾಂಕಃ 25.01.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
4. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/34/2022–23/4475, ದಿನಾಂಕಃ 06.02.2023
5. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/34/2023–24/1828, ದಿನಾಂಕಃ 23.08.2023
6. ಪ್ರಭಾರೆ ಪ್ರಾಂಶುಪಾಲರು, ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ ಇವರ ಪತ್ರ ಸಂಖ್ಯೆಃ ವಿದ್ಯಕಮ/ಮಾಸನಿ/2023–24/100, ದಿನಾಂಕಃ 07.09.2023
7. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ 29.09.2023.

*********

1. ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ17.08.2019ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಉಲ್ಲೇಖ (2)ರಲ್ಲಿ ಶ್ರೀ ಶೋಭ್ಯಾನಾಯ್ಕ ಹೆಚ್, ಹಂಗಾಮಿ ಕಿರಿಯ ಸಹಾಯಕರು – ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಿಕರಣಗೊಳಿಸಲಾಗಿತ್ತು.
2. ಆದರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ25.01.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಉಲ್ಲೇಖ (4)ರಲ್ಲಿ ಶ್ರೀ ಶೋಭ್ಯಾನಾಯ್ಕ ಹೆಚ್. ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಿಕರಣಗೊಳಿಸಿರುವ ಅಧಿಕೃತ ಜ್ಞಾಪನ ಪತ್ರವನ್ನು ಹಿಂಪಡೆಯಲಾಗಿದೆ.
3. ನಂತರ ಉಲ್ಲೇಖ (5)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಶ್ರೀ ಶೋಭ್ಯಾನಾಯ್ಕ ಹೆಚ್, ಹಂಗಾಮಿ ಕಿರಿಯ ಸಹಾಯಕರು – ಇವರನ್ನು ದಿನಾಂಕಃ14.07.2023ರಿಂದ ಅನ್ವಯವಾಗುವಂತೆ 06 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಹಂಗಾಮಿ ಕಿರಿಯ ಸಹಾಯಕರಾಗಿ ನೇಮಕಾತಿ ಮಾಡಲಾಗಿತ್ತು.
4. ಉಲ್ಲೇಖ (6)ರ ಪತ್ರದಲ್ಲಿ ಪ್ರಭಾರೆ ಪ್ರಾಂಶುಪಾಲರು, ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ ಇವರು – ಶ್ರೀ ಶೋಭ್ಯಾನಾಯ್ಕ ಹೆಚ್, ಇವರಿಗೆ ನೀಡಿದ ಅಧಿಕೃತ ಜ್ಞಾಪನ ಪತ್ರವನ್ನು ಸ್ವೀಕರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿಯವರು ಹಂಗಾಮಿ ಕಿರಿಯ ಸಹಾಯಕರ ನೇಮಕಾತಿಯನ್ನು ಸ್ವೀಕರಿಸದೆ, ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಬಗ್ಗೆ ಮಾಹಿತಿಯನ್ನು ನೀಡದೇ ಕರ್ತವ್ಯ ನಿರ್ವಹಿಸುತ್ತಿರುವುದು ವಿಶ್ವವಿದ್ಯಾನಿಲಯದ ನಿಯಮಗಳ ಉಲ್ಲಂಘಣೆಯಾಗಿರುತ್ತದೆ. ಯಾವುದೇ ಮಾಹಿತಿಗಳಿಲ್ಲದೆ ಸದರಿಯವರಿಗೆ ವೇತನ ನೀಡುವ ಬಗ್ಗೆ ದಿನಾಂಕಃ07.10.2023ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ**

ಶ್ರೀ ಶೋಭ್ಯಾನಾಯ್ಕ ಹೆಚ್, ಹಂಗಾಮಿ ಕಿರಿಯ ಸಹಾಯಕರು – ಇವರು ಮುಚ್ಚಳಿಕೆ ಪತ್ರವನ್ನು ಸಲ್ಲಿಸಿದರೆ ಮಾತ್ರ ವೇತನ ಬಿಡುಗಡೆ ಮಾಡಲು ಸಭೆಯು ನಿರ್ಣಯಿಸಿತು. ಮುಂದುವರೆದು, ವಿಶ್ವವಿದ್ಯಾನಿಲಯವು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳನ್ನು ಸದರಿಯವರು ಪಾಲನೆ ಮಾಡಬೇಕು ಹಾಗೂ ಸಿಂಡಿಕೇಟ್ ಮತ್ತು ಆಡಳಿತ ಮಂಡಳಿ ತೆಗೆದುಕೊಳ್ಳುವ ನಿರ್ಣಯಕ್ಕೆ ಬದ್ಧರಾಗಿರಬೇಕೆಂದು ಸದರಿಯವರಿಂದ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(g)/(10/23) |

## –:ಟಿಪ್ಪಣಿ:–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಮಾನವ ಸಂಪನ್ಮೂಲ ಸೇವೆ ಒದಗಿಸುತ್ತಿದ್ದ ಮೆ॥ ಬಿ.ಕೆ.ಆರ್. ಸ್ವಾಮಿ ಸೆಕ್ಯೂರಿಟಿ ಏಜೆನ್ಸಿ ಈಗ ಕಾರ್ಪೋರೇಟ್ ಕಂಪನಿಯಾಗಿ ಬದಲಾವಣೆಯಾಗಿರುವುದರಿಂದ B.K.R. Services Private Ltd. ಎಂಬ ಹೆಸರಿಗೆ ಅನುಮೋದನೆ ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ, ಸ್ನಾತಕೋತ್ತರ ಕೇಂದ್ರ ಜಿ.ಆರ್. ಹಳ್ಳಿ ಹಾಗೂ ಘಟಕ ಕಾಲೇಜುಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುತ್ತಿದ್ದ ಮೆ॥ ಬಿ.ಕೆ.ಆರ್. ಸ್ವಾಮಿ ಸೆಕ್ಯೂರಿಟಿ ಏಜೆನ್ಸಿ ಸಂಸ್ಥೆಯು B.K.R. Services Private Ltd. ಎಂಬ ಹೆಸರಿನ ಪೂರ್ಣ ಪ್ರಮಾಣದ ಕಾರ್ಪೋರೇಟ್ ಕಂಪನಿಯಾಗಿ ಮುಂದುವರೆದಿರುತ್ತದೆ. ಸದರಿ ಸಂಸ್ಥೆಯ ಮುಖ್ಯಸ್ಥರಾದ ಬಿ.ಕೆ.ಆರ್. ಸ್ವಾಮಿ ಯವರು ನಿಧನರಾದ ಹಿನ್ನಲೆಯಲ್ಲಿ ಸದರಿಯವರ ಸ್ಥಾನವನ್ನು ಅವರ ಪತ್ನಿ ಶ್ರೀಮತಿ ಪಂಕಜಾ ಆರ್. ಸ್ವಾಮಿ ರವರು ವಹಿಸಿಕೊಂಡಿದ್ದರಿಂದ ಪ್ರಸಕ್ತ B.K.R. Services Private Ltd. ಎಂಬ ಹೆಸರಿಗೆ ಅನುಮೋದನೆ ನೀಡುವ ಕುರಿತು ದಿನಾಂಕ:07.10.2023ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಮಾನವ ಸಂಪನ್ಮೂಲ ಸೇವೆ ಒದಗಿಸುತ್ತಿದ್ದ ಮೆ॥ ಬಿ.ಕೆ.ಆರ್. ಸ್ವಾಮಿ ಸೆಕ್ಯೂರಿಟಿ ಏಜೆನ್ಸಿ ಈಗ ಕಾರ್ಪೋರೇಟ್ ಕಂಪನಿಯಾಗಿ ಬದಲಾವಣೆಯಾಗಿರುವುದರಿಂದ **B.K.R. Services Private Ltd.** ಹೊಸದಾಗಿ ಸೂಚಿಸಿರುವ ಹೆಸರನ್ನು ಒಪ್ಪಿ ಸದರಿಯವರಿಂದ ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಸೇವೆಯನ್ನು ಪಡೆಯಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(h)/(10/23) |

# –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದಲ್ಲಿ ಕಾನೂನು ಕೋಶ (Legal Cell) ಸ್ಥಾಪನೆ ಮಾಡುವುದು ಹಾಗೂ ಕಾನೂನು ಸಲಹೆಗಾರರನ್ನು ನೇಮಿಸುವ ಕುರಿತು.**

*****

ವಿಶ್ವವಿದ್ಯಾನಿಲಯವು ಪ್ರಾರಂಭವಾದಾಗಿನಿಂದ ಪ್ರಸ್ತುತದವರೆಗೆ – ವಿಶ್ವವಿದ್ಯಾನಿಲಯದ ಬೋಧಕ/ ಬೋಧಕೇತರ ಹುದ್ದೆಗಳ ನೇಮಕಾತಿ, ಪದೋನ್ನತಿ ಮತ್ತು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ/ ಉಚ್ಚ ನ್ಯಾಯಾಲಯಗಳಲ್ಲಿ ದಾಖಲಾಗಿರುವ/ದಾಖಲಾಗುವ ಪ್ರಕರಣಗಳನ್ನು ಮೇಲ್ವಿಚಾರಣೆ/ ನಿರ್ವಹಣೆ ಮಾಡಲು ಹಾಗೂ ಸದರಿ ಪ್ರಕರಣಗಳು ವಿಲೇವಾರಿಯಾಗುವ ನಿಟ್ಟಿನಲ್ಲಿ ಸೂಕ್ತ ಕ್ರಮವಹಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಕೋಶವನ್ನು(Legal Cell) ಸ್ಥಾಪಿಸಬೇಕಾಗಿರುತ್ತದೆ ಹಾಗೂ ಕಾನೂನು ಕೋಶಕ್ಕೆ ನುರಿತ ನಿವೃತ್ತ ನ್ಯಾಯಾಧೀಶರು ಹಾಗೂ ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## <u>ನಿರ್ಣಯ</u>

ವಿಶ್ವವಿದ್ಯಾನಿಲಯದ ಬೋಧಕ/ ಬೋಧಕೇತರ ಹುದ್ದೆಗಳ ನೇಮಕಾತಿ, ಪದೋನ್ನತಿ ಮತ್ತು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ/ ಉಚ್ಚ ನ್ಯಾಯಾಲಯಗಳಲ್ಲಿ ದಾಖಲಾಗಿರುವ/ ದಾಖಲಾಗುವ ಪ್ರಕರಣಗಳನ್ನು ಮೇಲ್ವಿಚಾರಣೆ/ ನಿರ್ವಹಣೆ ಮಾಡಲು ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕವಾದ ಕಾನೂನು ಕೋಶ ಇಲ್ಲದೇ ಇರುವುದರಿಂದ ಕಾನೂನು ಕೋಶವನ್ನು(Legal Cell) ಪ್ರಾರಂಭಿಸಲು ಸಭೆಯು ನಿರ್ಣಯಿಸಿತು.

ಮುಂದುವರೆದು, ಕಾನೂನು ಕೋಶಕ್ಕೆ ಒಬ್ಬ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿಕೊಳ್ಳಲು ಹಾಗೂ ವಿಶ್ವವಿದ್ಯಾನಿಲಯದ ಪ್ರಕರಣಗಳಿಗೆ ಸಂಬಂಧಪಟ್ಟಂತೆ 03 ಸ್ಥಳೀಯ ಕಾನೂನು ಸಲಹೆಗಾರರು ಹಾಗೂ 03 ಉಚ್ಚ ನ್ಯಾಯಾಲಯದ ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳಲು ಪತ್ರಿಕಾ ಪ್ರಕಟಣೆ ಹೊರಡಿಸಿ ಹಾಗೂ ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್ಜಾಲದಲ್ಲಿ ಅರ್ಜಿ ಆಹ್ವಾನಿಸಿದ ನಂತರ ನೇಮಕ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(a)/(10/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಗೆ ಹೊಸದಾಗಿ 25 ಆಫೀಸ್ ಟೇಬಲ್ ಹಾಗೂ 25 ಚೇರ್‌ಗಳನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯ ಉಪಯೋಗಕ್ಕಾಗಿ ಚೇರ್ ಹಾಗೂ ಟೇಬಲ್‌ಗಳ ಅವಶ್ಯಕತೆ ಇರುವುದರಿಂದ ಹೊಸದಾಗಿ 25 ಆಫೀಸ್ ಟೇಬಲ್ ಹಾಗೂ 25 ಚೇರ್‌ಗಳನ್ನು ಖರೀದಿಸಬೇಕಾಗಿರುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಗೆ ಅಗತ್ಯವಿರುವ 25 ಆಫೀಸ್ ಟೇಬಲ್ ಹಾಗೂ 25 ಚೇರ್‌ಗಳನ್ನು ದರಪಟ್ಟಿ/ Manual Tender ಕರೆದು ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(b)/(10/23) |

## –:ಟಿಪ್ಪಣಿ:–

ವಿಷಯ: **2023–24ನೇ ಸಾಲಿನಲ್ಲಿ MCA ಕೋರ್ಸ್‌ನ್ನು ಪ್ರಾರಂಭಿಸಲು ಪ್ರಯೋಗಾಲಯಕ್ಕೆ ಅಗತ್ಯವಿರುವ ಕಂಪ್ಯೂಟರ್‌ಗಳು, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ಜೆಮ್(GEM) ಮೂಲಕ ಖರೀದಿಸಲು ಅನುಮೋದನೆ ನೀಡುವ ಕುರಿತು.**

*****

2023–24ನೇ ಸಾಲಿನಲ್ಲಿ MCA ಕೋರ್ಸ್‌ನ್ನು ಪ್ರಾರಂಭಿಸಲು ಪ್ರಯೋಗಾಲಯಕ್ಕೆ ಅಗತ್ಯವಿರುವ ಈ ಕೆಳಕಂಡ ಯಂತ್ರೋಪಕರಣ, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ಖರೀದಿಸಲು ದಿನಾಂಕ:31.07.2023 ರ ಸಿಂಡಿಕೇಟ್ ಸಭೆಯಲ್ಲಿ ಕಿಯೋನಿಕ್ಸ್ (KEONICS) ಮುಖಾಂತರ ಖರೀದಿಸಲು ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿತ್ತು.

ಆದರೆ, ಈ ಕೆಳಕಂಡ ಸಾಮಗ್ರಿಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲಾಗಿರುವುದರಿಂದ ಹಾಗೂ ವಿಶ್ವವಿದ್ಯಾನಿಲಯವು ಜೆಮ್ (GEM - Government e-Marketplace) ನಲ್ಲಿ ನೊಂದಣಿಯಾಗಿರುವುದರಿಂದ ಈ ಕೆಳಕಂಡ ಸಾಮಗ್ರಿಗಳನ್ನು ಕಿಯೋನಿಕ್ಸ್ ನಿಂದ ಖರೀದಿಸುವ ಬದಲು ಜೆಮ್(GEM) ಮೂಲಕ ಖರೀದಿಸಲು ದಿನಾಂಕ:07.10.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

| Sl. No | Requirements | Quantity |
|---|---|---|
| 1 | Computer | 65 |
| 2 | Computer Chairs | 65 |
| 3 | Computer Tables | 65 |
| 4 | LAN for 65 Computer, inverter A/C 1.5 Ton and Above | 01 |
| 5 | LED Projectors (For Clasrooms-02, Lab-1) | 03 |
| 6 | Laser Multi-function Printers | 05 |
| 7 | 20KVA UPS Back up for 65 Computers | 01 |
| 8 | All in one LED smart touch panel 86'' inch | 01 |

### <u>ನಿರ್ಣಯ</u>

2023–24ನೇ ಸಾಲಿನಲ್ಲಿ MCA ಕೋರ್ಸ್‌ನ್ನು ಪ್ರಾರಂಭಿಸಲು ಪ್ರಯೋಗಾಲಯಕ್ಕೆ ಅಗತ್ಯವಿರುವ ಈ ಮೇಲ್ಕಂಡ ಪಟ್ಟಿಯಲ್ಲಿರುವ ಯಂತ್ರೋಪಕರಣ, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ಜೆಮ್ (GEM) ಮುಖಾಂತರ ಖರೀದಿಸಲು ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(c)/(10/23) |

# –:ಟಿಪ್ಪಣಿ:–

**ವಿಷಯ: ಪತಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗೆ ಅಗತ್ಯವಿರುವ 01 ವಿಡಿಯೋ ಕ್ಯಾಮರಾ ಮತ್ತು 02 ಫೋಟೋ ಕ್ಯಾಮರಾ ಖರೀದಿಸಲು ಅನುಮೋದನೆ ನೀಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗೆ ಅಗತ್ಯವಿರುವ 01 ವಿಡಿಯೋ ಕ್ಯಾಮರಾ ಮತ್ತು 02 ಫೋಟೋ ಕ್ಯಾಮರಾ ಖರೀದಿಸಿ ಕೊಡುವಂತೆ ಸದರಿ ವಿಭಾಗದ ಅಧ್ಯಕರು ಕೋರಿರುವ ಹಿನ್ನಲೆಯಲ್ಲಿ ಸದರಿ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

<u>ನಿರ್ಣಯ</u>

ದಾವಣಗೆರೆ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗೆ ಅಗತ್ಯವಿರುವ 01 ವಿಡಿಯೋ ಕ್ಯಾಮರಾ ಮತ್ತು 02 ಫೋಟೋ ಕ್ಯಾಮರಾಗಳನ್ನು ಅಂದಾಜು ರೂ.2.00 ಲಕ್ಷದಲ್ಲಿ ನಿಯಮಾನುಸಾರ ದರಪಟ್ಟಿ ಕರೆದು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ | |
|---|---|
| ವಿಷಯ ಸಂಖ್ಯೆ: | ಸಿಂ.04(a)/(10/23) |

## –:ಟಿಪ್ಪಣಿ:–

**ವಿಷಯ: 2023–24ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ನೀಡುವ ಬಗ್ಗೆ.**

*****

ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳಲ್ಲಿ 2023–24ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ/ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ವಿದ್ಯಾರ್ಥಿಗಳ ಸೇರ್ಪಡೆಯ ಹೆಚ್ಚಳದಿಂದಾಗಿ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನಲ್ಲಿ ಬೋಧಿಸುತ್ತಿರುವ ಸ್ನಾತಕ/ ಸ್ನಾತಕೋತ್ತರ ಪದವಿಗಳ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ಕೋರಿಕೆಗಳನ್ನು ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚುವರಿ ಪ್ರವೇಶಾತಿಗೆ ಈಗಾಗಲೇ ಅನುಮತಿ ನೀಡಲಾಗಿದೆ(ಅನುಬಂಧ–1) ಹಾಗೂ ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳ ಪ್ರಾಂಶುಪಾಲರು 2023–24ನೇ ಶೈಕ್ಷಣಿಕ ಸಾಲಿಗೆ ಇನ್ನೂ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ತತ್ಸಂಬಂಧವಾಗಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, 2023–24ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ನೀಡಿರುವ ಹೆಚ್ಚುವರಿ ಪ್ರವೇಶ ಮಿತಿಗೆ ಅನುಮತಿ ನೀಡಲಾಗಿರುವುದನ್ನು ದಿನಾಂಕ:07.10.2023ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಸ್ಥಿರೀಕರಣಕ್ಕಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ**

2023–24ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ಈ ಕೆಳಕಂಡ 05 ಕಾಲೇಜುಗಳಿಗೆ ನೀಡಿರುವ ಹೆಚ್ಚುವರಿ ಪ್ರವೇಶ ಮಿತಿಗೆ ಅನುಮತಿ ನೀಡಲಾಗಿರುವುದನ್ನು ಪರಿಶೀಲಿಸಿ ಸಭೆಯು ಒಮ್ಮತದಿಂದ ಸ್ಥಿರೀಕರಿಸಿ ಅನುಮೋದಿಸಿತು.

| ಕ್ರ.ಸಂ | ಕಾಲೇಜಿನ ಹೆಸರು | ಪದವಿ | ಪ್ರಸ್ತುತ ಇರುವ ಪ್ರವೇಶ ಮಿತಿ | ನೀಡಲಾಗಿರುವ ಹೆಚ್ಚುವರಿ ಪ್ರವೇಶಮಿತಿ | ಇನ್ನೂ ಹೆಚ್ಚುವರಿಯಾಗಿ ನೀಡಿರುವ ಪ್ರವೇಶ ಮಿತಿ |
|---|---|---|---|---|---|
| 1 | ಜಿ.ಎಂ.ಎಸ್. ಅಕ್ಯಾಡೆಮಿ, ದಾವಣಗೆರೆ | ಬಿ.ಸಿ.ಎ | 150 | 30 | 30 |
| 2 | ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸ್ಕೂಲ್ ಆಫ್ ಹೈ–ಟೆಕ್ ಎಜುಕೇಷನ್, ದಾವಣಗೆರೆ | ಬಿ.ಸಿ.ಎ | 180 | 30 | 15 |
| 3 | ಡಾನ್ ಬಾಸ್ಕೊ ಡಿಗ್ರಿ ಕಾಲೇಜು, ಚಿತ್ರದುರ್ಗ | ಬಿ.ಸಿ.ಎ | 60 | 15 | 05 |
| 4 | ಜೆ.ಹೆಚ್. ಪಟೇಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಟೆಕ್ನಾಲಜಿ, ದಾವಣಗೆರೆ | ಬಿ.ಸಿ.ಎ | 110 | 20 | 12 |
| 5 | ಸರ್ಕಾರಿ ಪ್ರಥಮದರ್ಜೆ ಕಾಲೇಜು, ಚಿತ್ರದುರ್ಗ | ಬಿ.ಸಿ.ಎ | 60 | 12 | – |

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ | |
|---|---|
| ವಿಷಯ ಸಂಖ್ಯೆ: | ಸಿಂ.04(b)/(10/23) |

## -:ಟಿಪ್ಪಣಿ:-

**ವಿಷಯ:** **2023-24ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸು/ವಿಷಯಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು.**

ಉಲ್ಲೇಖ:
1. ಸರ್ಕಾರದ ಪತ್ರ ಸಂ: ಇಡಿ 139 ಡಿಸಿಇ 2023, ಬೆಂಗಳೂರು, ದಿನಾಂಕ:13.07.2023.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ – ಇವರ ಪತ್ರ ದಿನಾಂಕ:10.08.2023
3. ಸ್ಥಳೀಯ ತಪಾಸಣಾ ಸಮಿತಿಯ ಭೌತಿಕ ಪರಿಶೀಲನೆ ದಿನಾಂಕ:29.08.2023.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:06.09.2023.

*****

<u>ಪ್ರಸ್ತಾವನೆ</u>:–

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು– ಇವರು ಉಲ್ಲೇಖ(1)ರ ಪತ್ರದಲ್ಲಿ, 2023–24ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸು/ ವಿಷಯಗಳನ್ನು ಹೊಸದಾಗಿ ಪ್ರಾರಂಭಿಸಲು, ಬೇಡಿಕೆಗಳಿಗನುಗುಣವಾಗಿ ಈಗಾಗಲೇ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು ಅಗತ್ಯಕ್ಕೆ ಅನುಗುಣವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರವೇಶಾತಿ ನಿಯಮಗಳನ್ವಯ ಹೊಸ ವಿಷಯ/ಕೋರ್ಸುಗಳನ್ನು ಪ್ರಾರಂಭಿಸಲು ಸರ್ಕಾರವು ಅನುಮತಿ ನೀಡಿರುತ್ತದೆ. ಈ ಸಂಬಂಧವಾಗಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಶಿವಮೊಗ್ಗ– ಇವರು ಉಲ್ಲೇಖ(2)ರ ಪತ್ರದಲ್ಲಿ ಸರ್ಕಾರ ಆದೇಶಾನುಸಾರ, ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸು/ವಿಷಯಗಳನ್ನು 2023–24ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಅದರಂತೆ, ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2023–24ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಹೊಸ ಕೋರ್ಸು/ವಿಷಯಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು, ಕಾಲೇಜುಗಳ ಭೌತಿಕ ಪರಿಶೀಲನೆಗಾಗಿ ಸ್ಥಳೀಯ ತಪಾಸಣಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ:29.08.2023ರಂದು ಸರ್ಕಾರಿ ಕಾಲೇಜುಗಳಿಗೆ ಭೇಟಿ ನೀಡಿ, ಭೌತಿಕ ಪರಿಶೀಲನೆ ನಡೆಸಿ ಶಿಫಾರಸ್ಸು ವರದಿಯನ್ನು ನೀಡಿರುತ್ತದೆ.

ಆದ್ದರಿಂದ, 2023–24ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಸದಾಗಿ ಹೊಸ ಕೋರ್ಸು/ವಿಷಯಗಳನ್ನು ಪ್ರಾರಂಭಿಸಲು, ಉಲ್ಲೇಖಿತ (1)ರ ಸರ್ಕಾರದ ಆದೇಶಾನುಸಾರ, ವಿಶ್ವವಿದ್ಯಾನಿಲಯದ ಪ್ರಾಧಿಕಾರ ಸಭೆಗಳ ಅನುಮೋದನೆಯನ್ನು ಕಾಯ್ದಿರಿಸಿ

**ಮು.ತಿ.ನೋ..**

ಕುಲಸಚಿವರು

ಕುಲಪತಿಗಳು

ಹಾಗೂ ಮಾನ್ಯ ಕುಲಪತಿಯವರ ಉಲ್ಲೇಖ(4)ರ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ 08 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ(ಲಗತ್ತಿಸಿದೆ) 2023-24ನೇ ಶೈಕ್ಷಣಿಕ ಸಾಲಿನಿಂದ ಹೊಸ ಕೋರ್ಸು/ವಿಷಯಗಳನ್ನು ಹೊಸದಾಗಿ ಪ್ರಾರಂಭಿಸಲು ಮಂಜೂರಾತಿ ಆದೇಶ ನೀಡಲಾಗಿದೆ.

ಈ ಕುರಿತು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಸ್ಥಿರೀಕರಣಕ್ಕಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

2023-24ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಈ ಕೆಳಕಂಡ 08 ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಸದಾಗಿ ಹೊಸ ಕೋರ್ಸು/ವಿಷಯಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿರುವುದನ್ನು ಪರಿಶೀಲಿಸಿ ಸಭೆಯು ಒಮ್ಮತದಿಂದ ಸ್ಥಿರೀಕರಿಸಿ ಅನುಮೋದಿಸಿತು.

| ಕ್ರ.ಸಂ | ಕಾಲೇಜಿನ ಹೆಸರು | ಪದವಿ | ವಿಷಯವಾರು | 2023-24ನೇ ಸಾಲಿಗೆ ಹೊಸ ವಿಷಯ | 2023-24ನೇ ಶೈಕ್ಷಣಿಕ ಸಾಲಿಗೆ ಹೊಸ ಪದವಿ |
|---|---|---|---|---|---|
| | | | | ವಿದ್ಯಾರ್ಥಿ ಪ್ರವೇಶಮಿತಿ | |
| 1 | 2 | 3 | 4 | 5 | 6 |
| 1 | ಹೆಚ್.ಪಿ.ಪಿ.ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. | ಬಿ.ಸಿ.ಎ | ಕಡ್ಡಾಯ ವಿಷಯಗಳು | - | 120 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು. | ಬಿ.ಸಿ.ಎ | ಕಡ್ಡಾಯ ವಿಷಯಗಳು | - | 30 |
| 3 | ಶ್ರೀ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ. | BSW | ಕಡ್ಡಾಯ ವಿಷಯಗಳು | - | 40 |
| | | ಬಿ.ಸಿ.ಎ | ಕಡ್ಡಾಯ ವಿಷಯಗಳು | - | 40 |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನ್ಯಾಮತಿ | ಬಿ.ಸಿ.ಎ. | ಕಡ್ಡಾಯ ವಿಷಯಗಳು | - | 40 |
| 5 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ | ಬಿ.ಎ | ದೈಹಿಕ ಶಿಕ್ಷಣ | 25 | - |
| | | ಬಿ.ಎಸ್ಸಿ | ಪರಿಸರ ವಿಜ್ಞಾನ | 25 | - |
| 6 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ | ಬಿ.ಸಿ.ಎ | ಕಡ್ಡಾಯ ವಿಷಯಗಳು | - | 40 |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಿಹರ | ಬಿ.ಸಿ.ಎ | ಕಡ್ಡಾಯ ವಿಷಯಗಳು | - | 60 |
| 8 | ಪ.ಜಾ/ಪ.ಪಂ. ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಲ್ಲಾಡಿಹಳ್ಳಿ. | ಬಿ.ಸಿ.ಎ | ಕಡ್ಡಾಯ ವಿಷಯಗಳು | - | 25 |
| | | ಬಿ.ಎ | ಸಮಾಜಶಾಸ್ತ್ರ | 20 | - |
| | | | ಕನ್ನಡ | 20 | - |
| | | ಬಿ.ಎಸ್ಸಿ | ರಸಾಯನಶಾಸ್ತ್ರ | 25 | - |

ಕುಲಸಚಿವರು　　　　　　　　ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(a)/(10/23) |

# -:ಟಿಪ್ಪಣಿ:-

**ವಿಷಯಃ ದಿನಾಂಕ:11.09.2023 ರಂದು ನಡೆದ 2023-24ನೇ ಸಾಲಿನ ಆರ್ಥಿಕ ವರ್ಷದ ಒಂದನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.**

ಉಲ್ಲೇಖ: 1. ಹಣಕಾಸು ಸಮಿತಿ ಸಭೆಯ ಅನುಮೋದನೆ ದಿನಾಂಕ:11.09.2023.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:27.09.2023

*****

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇಲ್ಲಿ ದಿನಾಂಕ:11.09.2023 ರಂದು ಜರುಗಿದ ವಿಶ್ವವಿದ್ಯಾನಿಲಯದ 2023-24ನೇ ಆರ್ಥಿಕ ವರ್ಷದ ಒಂದನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ 2023-24ನೇ ಆರ್ಥಿಕ ವರ್ಷದ ಒಂದನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಕುರಿತು ಸಭೆಯು ಕೂಲಂಕುಶವಾಗಿ ಚರ್ಚಿಸಿದ ಬಳಿಕ ನಡಾವಳಿಗಳನ್ನು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(b)/(10/23) |

## –:ಟಿಪ್ಪಣಿ:–

**ವಿಷಯಃ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆ ಕುರಿತು.**

ಉಲ್ಲೇಖ: 1. ಹಣಕಾಸು ಸಮಿತಿ ಸಭೆಯ ಅನುಮೋದನೆ ದಿನಾಂಕ:11.09.2023.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:27.09.2023

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ (48) ರನ್ವಯ ವಿಶ್ವವಿದ್ಯಾನಿಲಯದ 2022–23ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧವಾಗಿ ವಿಶ್ವವಿದ್ಯಾನಿಲಯದ 2022–23ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದೆ.

ತತ್ಸಂಬಂಧವಾಗಿ, ಈ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದ 2022–23ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಸಭೆಯು ಸುದೀರ್ಘವಾಗಿ ಚರ್ಚಿಸಿದ ನಂತರ ಸರ್ಕಾರಕ್ಕೆ ಸಲ್ಲಿಸಲು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(c)/(10/23) |

## -:ಟಿಪ್ಪಣಿ:-

**ವಿಷಯ:** **2020-21ನೇ ಸಾಲಿನ ಲೆಕ್ಕ ಪರಿಶೋದನಾ ವರದಿಯ ಅನುಸರಣಾ ವರದಿಯನ್ನು ಆಡ್‌ಹಾಕ್ ಸಮಿತಿ ಸಭೆಗೆ ಮಂಡಿಸಲು ಅನುಮೋದನೆ ಕುರಿತು.**

ಉಲ್ಲೇಖ:
1. ಸರ್ಕಾರದ ಪತ್ರಸಂಖ್ಯೆ:KSAAD/ AUD3/BNGR(OTHER)/ 1/2022/1620, ದಿನಾಂಕ:23.08.2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:21.09.2023

*****

ಸರ್ಕಾರದ ಉಲ್ಲೇಖಿತ ಪತ್ರದಲ್ಲಿ, ವಿಶ್ವವಿದ್ಯಾನಿಲಯದ 2020-21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ನೀಡಿರುತ್ತದೆ. ಸದರಿ ಪತ್ರದಲ್ಲಿ ತಿಳಿಸಿರುವಂತೆ, 2020-21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆ/ ವಸೂಲಾತಿ ಕಂಡಿಕೆಗಳಿಗೆ ಲೆಕ್ಕ ತೀರುವಳಿಗಾಗಿ ಅನುಸರಣಾ ವರದಿಯನ್ನು ಸಿದ್ಧಪಡಿಸಿ ಆಡ್‌ಹಾಕ್ ಸಮಿತಿ ಸಭೆಗೆ ಸಲ್ಲಿಸಬೇಕಾಗಿರುತ್ತದೆ.

ತತ್ಸಂಬಂಧವಾಗಿ, ಈ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ 2020-21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆ/ ವಸೂಲಾತಿ ಕಂಡಿಕೆಗಳಿಗೆ ಲೆಕ್ಕ ತೀರುವಳಿಗಾಗಿ ಅನುಸರಣಾ ವರದಿಯನ್ನು ಸಿದ್ಧಪಡಿಸಿ ಆಡ್‌ಹಾಕ್ ಸಮಿತಿ ಸಭೆಯಲ್ಲಿ ಮಂಡಿಸಿ ತೀರುವಳಿಗಾಗಿ ಕ್ರಮ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                                ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(a)/(10/23) |

## -ಃಟಿಪ್ಪಣಿಃ-

**ವಿಷಯಃ ಮಾರ್ಚ್/ ಏಪ್ರಿಲ್ 2022-23ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಪರೀಕ್ಷಾ ತಂತ್ರಾಂಶ ಅಳವಡಿಸಿರುವ (4ನೇ ಕಂತಿನ) ಬಾಬ್ತು ರೂ.3,57,280/- ಗಳನ್ನು ಪಾವತಿ ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018-19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ-ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆ M/S;Unicalre Solutions Pvt Ltd, Bangalore ಇವರಿಂದ ಹೊಸ ಪರೀಕ್ಷಾ ತಂತ್ರಾಂಶ E-Governace ಗೆ ಸಂಬಂಧಪಟ್ಟಂತೆ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.133/- ರಂತೆ 25,630 - ವಿದ್ಯಾರ್ಥಿಗಳ ಒಟ್ಟು ಮೊತ್ತ ರೂ.34,08,790/-ಗಳಾಗಿರುತ್ತದೆ, ಮಾರ್ಚ್/ ಏಪ್ರಿಲ್-2023 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/S;Unicalre Solutions Pvt. Ltd, Bangalore ರವರಿಗೆ ಈಗಾಗಲೇ 1ನೇ, 2ನೇ ಮತ್ತು 3ನೇ ಕಂತಿನವರೆಗೆ ಶೇಕಡ ಪ್ರತಿ ಕಂತಿಗೆ 30ರಷ್ಟು ಹಣವನ್ನು ಪಾವತಿಸಿದ್ದು, ಸದರಿ ಸಂಸ್ಥೆಯವರಿಗೆ ನಾಲ್ಕನೇ ಕಂತಿನ ಅಂತಿಮ ಬಿಲ್ಲಿನ ಮೊತ್ತ **ರೂ.3,57,280**/-(ಮೂರು ಲಕ್ಷದ ಐವತ್ತೇಳು ಸಾವಿರದ ಎರಡು ನೂರ ಎಂಭತ್ತು ಮಾತ್ರ) ಗಳನ್ನು ಪಾವತಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

ಮಾರ್ಚ್/ ಏಪ್ರಿಲ್-2023 ರ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Unicalre Solutions Pvt. Ltd, Bangalore - ಇವರ **ನಾಲ್ಕನೇ ಕಂತಿನ** ಬಿಲ್ಲುಗಳನ್ನು ದಿನಾಂಕ:07.10.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುವ ನಡಾವಳಿಗಳನ್ನು ಪರಿಶೀಲಿಸಿದ ನಂತರ ಸದರಿ ಬಿಲ್ಲಿನ **ಬಾಬ್ತು ರೂ.3,57,280/- ಗಳನ್ನು** M/S;Unicalre Solutions Pvt. Ltd, Bangalore - ಇವರಿಗೆ ಪಾವತಿಸಲು ಸಿಂಡಿಕೇಟ್ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(b)/(10/23) |

## -ಃಟಿಪ್ಪಣಿಃ-

**ವಿಷಯಃ ಮಾರ್ಚ್/ ಏಪ್ರಿಲ್ 2022-23ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಪರೀಕ್ಷಾ ತಂತ್ರಾಂಶ ಅಳವಡಿಸಿರುವ (4ನೇ ಕಂತಿನ) ಬಾಬ್ತು ರೂ.5,66,812/- ಗಳನ್ನು ಪಾವತಿ ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018-19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ-ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆ M/S;Logisys, Bangalore ಇವರಿಂದ ಪರೀಕ್ಷಾ ತಂತ್ರಾಂಶ E-Governace ಗೆ ಸಂಬಂಧಪಟ್ಟಂತೆ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.211/- ರಂತೆ 25,630 ವಿದ್ಯಾರ್ಥಿಗಳ ಒಟ್ಟು ಮೊತ್ತ ರೂ.54,07,930/- ಗಳಾಗಿರುತ್ತದೆ. ಮಾರ್ಚ್/ಏಪ್ರಿಲ್-2023 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/S;Logisys, Bangalore ರವರಿಗೆ, ಈಗಾಗಲೇ 1ನೇ, 2ನೇ ಮತ್ತು 3ನೇ ಕಂತಿನವರೆಗೆ ಶೇಕಡ ಪ್ರತಿ ಕಂತಿಗೆ 30ರಷ್ಟು ಹಣವನ್ನು ಪಾವತಿಸಿದ್ದು, ಸದರಿ ಸಂಸ್ಥೆಯವರಿಗೆ ನಾಲ್ಕನೇ ಕಂತಿನ ಅಂತಿಮ ಬಿಲ್ಲಿನ **ಮೊತ್ತ ರೂ.5,66,812/-** (ರೂಪಾಯಿ ಐದು ಲಕ್ಷದ ಅರವತ್ತಾರು ಸಾವಿರದ ಎಂಟು ನೂರ ಹನ್ನೆರಡು ಮಾತ್ರ) ಗಳನ್ನು ಪಾವತಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

### ನಿರ್ಣಯ

ಮಾರ್ಚ್/ ಏಪ್ರಿಲ್-2023 ರ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Logisys, Bangalore - ಇವರ **ನಾಲ್ಕನೇ ಕಂತಿನ** ಬಿಲ್ಲುಗಳನ್ನು ದಿನಾಂಕ:07.10.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುವ ನಡಾವಳಿಗಳನ್ನು ಪರಿಶೀಲಿಸಿದ ನಂತರ ಸದರಿ ಬಿಲ್ಲಿನ **ಬಾಬ್ತು ರೂ.5,66,812/- ಗಳನ್ನು** M/S;Logisys, Bangalore - ಇವರಿಗೆ ಪಾವತಿಸಲು ಸಿಂಡಿಕೇಟ್ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(c)/(10/23) |

## -:ಟಿಪ್ಪಣಿ:-

**ವಿಷಯ: ಜುಲೈ/ ಆಗಸ್ಟ್ 2023-24ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಪರೀಕ್ಷಾ ತಂತ್ರಾಂಶ ಅಳವಡಿಸಿರುವ (1 & 2ನೇ ಕಂತಿನ) ಬಾಬ್ತು ರೂ.31,33,856/- ಗಳನ್ನು ಪಾವತಿ ಮಾಡುವ ಬಗ್ಗೆ.**

*****

ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018-19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ-ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆ M/S;Logisys, Bangalore ಇವರಿಂದ ಪರೀಕ್ಷಾ ತಂತ್ರಾಂಶ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.211/- ರಂತೆ ಅಂದಾಜು 24,754 ವಿದ್ಯಾರ್ಥಿಗಳಿಗೆ ರೂ.52,23,094/-ಗಳನ್ನು ಜುಲೈ/ ಆಗಸ್ಟ್-2023 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/S;Logisys, Bangalore ರವರು ಹಣ ಪಾವತಿ ಮಾಡಲು ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ಬಿಲ್ಲುಗಳ ವಿವರ ಈ ಕೆಳಕಂಡತಿದೆ.

| ಕ್ರಸಂ | ವಿವರಗಳು | ಬಿಲ್ ನಂ | ಮೊತ್ತ | ಷರಾ |
|---|---|---|---|---|
| 01 | ಮೊದಲನೇ ಕಂತಿನ ಹಣ (ಶೇಕಡ 30% ರಷ್ಟು) | BN/092/23-24 | ರೂ.15,66,928-00 | ಹಣ ಪಾವತಿಸಬೇಕು |
| 02 | ಎರಡನೇ ಕಂತಿನ ಹಣ (ಶೇಕಡ 30% ರಷ್ಟು) | BN/093/23-24 | ರೂ.15,66,928-00 | ಹಣ ಪಾವತಿಸಬೇಕು |
| | | **ಒಟ್ಟು ಮೊತ್ತ:** | **ರೂ.31,33,856-00** | |

ಆದ್ದರಿಂದ ಪ್ರತಿ ಕಂತಿನ ಶೇಕಡ 30% ರಂತೆ ಒಟ್ಟು 02 ಕಂತಿನ ಶೇಕಡ 60% ರಷ್ಟು ಹಣದ ಮೊತ್ತ **ರೂ.31,33,856/-** (ರೂಪಾಯಿಗಳು ಮುವತ್ತೊಂದು ಲಕ್ಷದ ಮೂವತ್ತೂರು ಸಾವಿರದ ಎಂಟು ನೂರ ಐವತ್ತಾರು ಮಾತ್ರ) ಗಳಾಗಿರುತ್ತದೆ. ಸದರಿ ಬಿಲ್ಲುಗಳ ಮೊತ್ತವನ್ನು ಪಾವತಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

## ನಿರ್ಣಯ

ಜುಲೈ/ ಆಗಸ್ಟ್-2023ರ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Logisys, Bangalore - ಇವರ **1 ಮತ್ತು 2ನೇ ಕಂತಿನ** (ತಲಾ 30% ರಷ್ಟು) ಬಿಲ್ಲುಗಳನ್ನು ದಿನಾಂಕ:07.10.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುವ ನಡಾವಳಿಗಳನ್ನು ಪರಿಶೀಲಿಸಿದ ನಂತರ ಸದರಿ ಬಿಲ್ಲಿನ **ಬಾಬ್ತು ರೂ.31,33,856/- ಗಳನ್ನು** M/S;Logisys, Bangalore - ಇವರಿಗೆ ಪಾವತಿಸಲು ಸಿಂಡಿಕೇಟ್ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(d)/(10/23) |

**-:ಟಿಪ್ಪಣಿ:-**

**ವಿಷಯ: ಜುಲೈ/ ಆಗಸ್ಟ್ 2023-24ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಪರೀಕ್ಷಾ ತಂತ್ರಾಂಶ ಅಳವಡಿಸಿರುವ (1 & 2ನೇ ಕಂತಿನ) ಬಾಬ್ತು ರೂ.19,75,368/- ಗಳನ್ನು ಪಾವತಿ ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018-19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ-ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆ M/S;Unicalre Solutions Pvt. Ltd, Bangalore ಇವರಿಂದ ಪರೀಕ್ಷಾ ತಂತ್ರಾಂಶ E-Governace ಗೆ ಸಂಬಂಧಪಟ್ಟಂತೆ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.133/- ರಂತೆ ಅಂದಾಜು 24,754- ವಿದ್ಯಾರ್ಥಿಗಳಿಗೆ ರೂ.32,92,282/-ಗಳನ್ನು ಜುಲೈ/ ಆಗಸ್ಟ್-2023 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/S;Unicalre Solutions Pvt. Ltd, Bangalore ರವರು ಹಣ ಪಾವತಿ ಮಾಡಲು ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ಬಿಲ್ಲುಗಳ ವಿವರ ಈ ಕೆಳಕಂಡತಿದೆ.

| ಕ್ರಸಂ | ವಿವರಗಳು | ಬಿಲ್ ನಂ | ಮೊತ್ತ | ಷರಾ |
|---|---|---|---|---|
| 01 | ಮೊದಲನೇ ಕಂತಿನ ಹಣ (ಶೇಕಡ 30% ರಷ್ಟು) | BN/UC/045/23-24 | ರೂ.9,87,684-00 | ಹಣ ಪಾವತಿಸಬೇಕು |
| 02 | ಎರಡನೇ ಕಂತಿನ ಹಣ (ಶೇಕಡ 30% ರಷ್ಟು) | BN/UC/046/23-24 | ರೂ.9,87,684-00 | ಹಣ ಪಾವತಿಸಬೇಕು |
| | | **ಒಟ್ಟು ಮೊತ್ತ:** | **ರೂ.19,75,368-00** | |

ಆದ್ದರಿಂದ ಪ್ರತಿ ಕಂತಿನ ಶೇಕಡ 30% ರಂತೆ ಒಟ್ಟು 02 ಕಂತಿನ ಶೇಕಡ 60% ರಷ್ಟು ಹಣದ ಮೊತ್ತ **ರೂ.19,75,368/-** (ರೂಪಾಯಿಗಳು ಹತ್ತೊಂಬತ್ತು ಲಕ್ಷದ ಎಪ್ಪತ್ತೈದು ಸಾವಿರದ ಮೂರುನೂರ ಅರವತ್ತೆಂಟು ಮಾತ್ರ) ಗಳಾಗಿರುತ್ತದೆ. ಸದರಿ ಬಿಲ್ಲುಗಳ ಮೊತ್ತವನ್ನು ಪಾವತಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ**

ಜುಲೈ/ ಆಗಸ್ಟ್-2023ರ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Unicalre Solutions Pvt. Ltd, Bangalore -ಇವರ **1 ಮತ್ತು 2ನೇ ಕಂತಿನ** (ತಲಾ 30% ರಷ್ಟು) ಬಿಲ್ಲುಗಳನ್ನು ದಿನಾಂಕ:07.10.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುವ ನಡಾವಳಿಗಳನ್ನು ಪರಿಶೀಲಿಸಿದ ನಂತರ ಸದರಿ ಬಿಲ್ಲಿನ **ಬಾಬ್ತು ರೂ.19,75,368/- ಗಳನ್ನು** M/S;Unicalre Solutions Pvt. Ltd, Bangalore - ಇವರಿಗೆ ಪಾವತಿಸಲು ಸಿಂಡಿಕೇಟ್ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(e)/(10/23) |

## -:ಟಿಪ್ಪಣಿ:-

**ವಿಷಯಃ ಜುಲೈ/ ಆಗಸ್ಟ್-2023 ರ ಪದವಿ ಪರೀಕ್ಷೆಗಳಿಗೆ ಬೇಕಾಗುವ ಲೇಖನ/ ಮುದ್ರಿತ ಸಾಮಾಗ್ರಿಗಳನ್ನು ಖರೀದಿಸಿದ ಬಾಬ್ತು ರೂ.4,74,776/- ಗಳನ್ನು ಪಾವತಿಸಲು ಅನುಮೋದನೆ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಜುಲೈ/ಆಗಸ್ಟ್-2023 ರ ಪದವಿ ಪರೀಕ್ಷೆಗಳಿಗೆ ಬೇಕಾದ ಲೇಖನ/ಮುದ್ರಣ ಲೇಖನ ಸಾಮಾಗ್ರಿಗಳನ್ನು ಇ-ಟೆಂಡರ್ ನಲ್ಲಿ ಯಶಸ್ವಿಯಾದ Sri.Uttamchand Indira M/S.Ujeshasta Enterprises,Harapanahalli ಇವರಿಂದ ಖರೀದಿಸಲಾಗಿದ್ದು, ಸದರಿಯವರು ಬಿಲ್ಲಿನ **ಬಾಬ್ತು ರೂ.4,74,776/-**(ರೂಪಾಯಿಗಳು ನಾಲ್ಕು ಲಕ್ಷದ ಎಪ್ಪತ್ನಾಲ್ಕು ಸಾವಿರದ ಏಳು ನೂರ ಎಪ್ಪತ್ತಾರು ಮಾತ್ರ) ಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ, ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

### ನಿರ್ಣಯ

ಜುಲೈ/ ಆಗಸ್ಟ್-2023 ರ ಪದವಿ ಪರೀಕ್ಷೆಗಳಿಗೆ ಬೇಕಾದ ಲೇಖನ/ ಮುದ್ರಣ ಲೇಖನ ಸಾಮಾಗ್ರಿಗಳನ್ನು ಇ-ಟೆಂಡರ್ ನಲ್ಲಿ ಯಶಸ್ವಿಯಾದ Sri.Uttamchand Indira M/S.Ujeshasta Enterprises, Harapanahalli ಇವರಿಂದ ಖರೀದಿಸಲಾಗಿದ್ದು, ಸದರಿ ಬಿಲ್ಲುಗಳನ್ನು ದಿನಾಂಕ:07.10.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುವ ನಡಾವಳಿಗಳನ್ನು ಪರಿಶೀಲಿಸಿದ ನಂತರ ಸದರಿ ಬಿಲ್ಲಿನ **ಬಾಬ್ತು ರೂ.4,74,776/- ಗಳನ್ನು** Sri.Uttamchand Indira M/S.Ujeshasta Enterprises, Harapanahalli - ಇವರಿಗೆ ಪಾವತಿಸಲು ಸಿಂಡಿಕೇಟ್ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.06(f)/(10/23) |

## -:ಟಿಪ್ಪಣಿ:-

**ವಿಷಯ: ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜುಲೈ/ಆಗಸ್ಟ್-2023 ರಲ್ಲಿ ನಡೆದ ಸ್ನಾತಕ/ಬಿ.ಇಡಿ ಪರೀಕ್ಷೆಗಳಲ್ಲಿ ಅಕ್ರಮವೆಸಗಿರುವ 183 ವಿದ್ಯಾರ್ಥಿಗಳ ಪಟ್ಟಿಯನ್ನು ಮತ್ತು ದಿನಾಂಕ:05-09-2023 ಮತ್ತು ದಿನಾಂಕ:27-09-2023 ರಂದು ನಡೆದ ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ ಸಭೆಯ ನಡಾವಳಿಯನ್ನು ಪರಿಶೀಲನೆ ಹಾಗೂ ಅನುಮೋದನೆಗಾಗಿ ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

### <u>ನಿರ್ಣಯ</u>

ಜುಲೈ/ಆಗಸ್ಟ್-2023 ರಲ್ಲಿ ನಡೆದ ಸ್ನಾತಕ/ಬಿ.ಇಡಿ ಪರೀಕ್ಷೆಗಳಲ್ಲಿ ಅಕ್ರಮವೆಸಗಿರುವ 183 ವಿದ್ಯಾರ್ಥಿಗಳ ಪಟ್ಟಿಯನ್ನು ಮತ್ತು ದಿನಾಂಕ:05.09.2023 ಮತ್ತು ದಿನಾಂಕ:27.09.2023 ರಂದು ನಡೆದ ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ ಸಭೆಯ ನಡಾವಳಿಗಳನ್ನು ಕುರಿತು ಕೂಲಂಕುಶವಾಗಿ ಚರ್ಚಿಸಿದ ಬಳಿಕ ಸಿಂಡಿಕೇಟ್ ಸಭೆಯು ಒಮ್ಮತದಿಂದ ನಡಾವಳಿಗಳನ್ನು ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(g)/(10/23) |

# –:ಟಿಪ್ಪಣಿ:–

**ವಿಷಯ: ಜುಲೈ/ ಆಗಸ್ಟ್ – 2023 ರಲ್ಲಿ ನಡೆದ ಸ್ನಾತಕ ಪದವಿ ಪರೀಕ್ಷಾ ಕಾರ್ಯಗಳಿಗೆ ದಿನದ ಬಾಡಿಗೆ ಆಧಾರದ ಮೇಲೆ ವಾಹನ ಸರಬರಾಜು ಮಾಡಿದ ಬಾಬ್ತು ರೂ.5,83,950/–ಗಳನ್ನು ಪಾವತಿಸಲು ಅನುಮೋದನೆ**

*****

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ಪದವಿ ಸ್ನಾತಕ ಪರೀಕ್ಷಾ ಹಾಗೂ ಇತರೆ ಕಾರ್ಯಗಳಿಗೆ ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಸರಬರಾಜು ಮಾಡಲು 2022–2023ನೇ ಇ–ಟೆಂಡರ್ ಕರೆಯಲಾಗಿದ್ದು. ಅದರಲ್ಲಿ ಯಶಸ್ವಿಯಾದ ಸಂಸ್ಥೆ Sri Nazeer Sab M/S Al-Hind Tours & Travels, Davangere ಇವರಿಂದ ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯಲಾಗಿತ್ತು. ಅದರಂತೆ ಸದರಿಯವರಿಂದ ವಾಹನಗಳನ್ನು ಬಳಸಿಕೊಂಡು ಜುಲೈ/ಆಗಸ್ಟ್–2023ರ ಪರೀಕ್ಷಾ ಕಾರ್ಯಗಳನ್ನು ನಡೆಸಲಾಗಿತ್ತು. ಸದರಿಯವರು ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಸರಬರಾಜು ಮಾಡಿದ ಬಿಲ್ಲಿನ ಮೊತ್ತ **ರೂ.5,83,950/–** (ರೂಪಾಯಿಗಳು ಐದು ಲಕ್ಷದ ಎಂಭತ್ಮೂರು ಸಾವಿರದ ಒಂಬೈನೂರ ಐವತ್ತು ಮಾತ್ರ) ಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

## ನಿರ್ಣಯ

ಜುಲೈ/ಆಗಸ್ಟ್–2023ರ ಸ್ನಾತಕ ಪರೀಕ್ಷಾ ಕಾರ್ಯಗಳಿಗೆ ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಸರಬರಾಜು ಮಾಡಲು ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ Sri Nazeer Sab M/S Al-Hind Tours & Travels, Davangere ಇವರಿಂದ ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯಲಾಗಿದ್ದು, ಸದರಿ ಬಿಲ್ಲುಗಳನ್ನು ದಿನಾಂಕ:07.10.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುವ ನಡಾವಳಿಗಳನ್ನು ಪರಿಶೀಲಿಸಿದ ನಂತರ ಸದರಿ ಬಿಲ್ಲಿನ ಬಾಬ್ತು **ರೂ.5,83,950/– ಗಳನ್ನು** Sri Nazeer Sab M/S Al-Hind Tours & Travels, Davangere - ಇವರಿಗೆ ಪಾವತಿಸಲು ಸಿಂಡಿಕೇಟ್ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(h)/(10/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮವನ್ನು ನಡೆಸುವ ಕುರಿತು.**

*****

ವಿಶ್ವವಿದ್ಯಾನಿಲಯದ 11ನೇ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮವನ್ನು ಮುಂಬರುವ ದಿನಗಳಲ್ಲಿ (ಜನವರಿ)–2024 ರ ಮಾಹೆಯಲ್ಲಿ ನಡೆಸಲು ಅನುಮೋದನೆಗಾಗಿ ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮವನ್ನು ಮುಂಬರುವ ಡಿಸೆಂಬರ್–2023 ಅಥವಾ ಜನವರಿ–2024 ರ ಮಾಹೆಯಲ್ಲಿ ನಡೆಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(i)/(10/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಪೆಂಡಾಲ್ ಮತ್ತು ಊಟದ ವ್ಯವಸ್ಥೆಯನ್ನು ಇ–ಪೋಟಲ್ ನಲ್ಲಿ ಟೆಂಡರ್ ಆಹ್ವಾನಿಸುವ ಬಗ್ಗೆ.**

*****

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ನಡೆಸಲಾಗುವ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು/ಪೋಷಕರು/ಗಣ್ಯವ್ಯಕ್ತಿಗಳು ಪಾಲ್ಗೊಳ್ಳುವುದರಿಂದ ಈ ಕಾರ್ಯಕ್ರಮವನ್ನು ಸುಂದರವಾಗಿ/ಯಶಸ್ವಿಯಾಗಿ ನಿರ್ವಹಿಸಲು ಆಸನದ ವ್ಯವಸ್ಥೆ ಒಳಗೊಂಡ ಪೆಂಡಾಲ್, ಲೈಟಿಂಗ್, ಸೌಂಡ್ ಸಿಸ್ಟಮ್/ಊಟದ ವ್ಯವಸ್ಥೆಗಾಗಿ ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ಏರ್ಪಡಿಸಲಾಗುವ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಪೆಂಡಾಲ್, ಲೈಟಿಂಗ್, ಸೌಂಡ್ ಸಿಸ್ಟಮ್/ ಊಟದ ವ್ಯವಸ್ಥೆಗಾಗಿ ಇ–ಪೋರ್ಟಲ್‌ನಲ್ಲಿ/ ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಸಭೆಯು ಚರ್ಚಿಸಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(j)/(10/23) |

# –ಃಟಿಪ್ಪಣಿಃ–

**ವಿಷಯಃ ಚಿನ್ನದ ಪದಕ ಖರೀದಿಸುವ ಸಂಬಂಧ ಇ–ಟೆಂಡರ್ ಆಹ್ವಾನಿಸುವ ಬಗ್ಗೆ.**

*****

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ನಡೆಸಲಾಗುವ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸ್ನಾತಕ/ ಸ್ನಾತಕೋತ್ತರ ಪದವಿಗಳಲ್ಲಿ Rank ಪಡೆದ ವಿದ್ಯಾರ್ಥಿಗಳಿಗೆ Gold Medal (ಚಿನ್ನದ ಪದಕ) ನೀಡುವ ಸಲುವಾಗಿ ಪದಕ ತಯಾರಿಸುವ ಸಂಸ್ಥೆಯವರಿಂದ ಖರೀದಿಸುವ ದಿನದ ದರಕ್ಕನುಗುಣವಾಗಿ ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ. ಆದ್ದರಿಂದ, ಟೆಂಡರ್ ಆಹ್ವಾನಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ಏರ್ಪಡಿಸಲಾಗುವ 11ನೇ ವಾರ್ಷಿಕ ಘಟಿಕೋತ್ಸವದ ಸ್ನಾತಕ/ ಸ್ನಾತಕೋತ್ತರ ಪದವಿಗಳಲ್ಲಿ Rank ಪಡೆದ ವಿದ್ಯಾರ್ಥಿಗಳಿಗೆ Gold Medal (ಚಿನ್ನದ ಪದಕ) ನೀಡುವ ಸಲುವಾಗಿ ಪದಕ ತಯಾರಿಸುವ ಸಂಸ್ಥೆಯವರಿಂದ ಖರೀದಿಸುವ ದಿನದ ದರಕ್ಕನುಗುಣವಾಗಿ ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(k)/(10/23) |

## –ಃಟಿಪ್ಪಣಿಃ–

**ವಿಷಯಃ ಲೆಡ್ಜರ್ ಶೀಟ್‌ಗಳನ್ನು ಖರೀದಿಸುವ ಕುರಿತು.**

*****

NEP–2020 ರ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿದ ಎಲ್ಲಾ ಸೆಮಿಸ್ಟರ್‌ನ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟವಾಗಿರುವ ವಿವರಗಳ ಲೆಡ್ಜರ್ ಶೀಟುಗಳನ್ನು ಮುದ್ರಿಸಲು ರೂ.1,50,000/–ಗಳ ಮಿತಿಯೊಳಗೆ ಲೆಡ್ಜರ್ ಶೀಟುಗಳನ್ನು ಖರೀದಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

### ನಿರ್ಣಯ

NEP–2020 ರ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿದ 1 ರಿಂದ 4ನೇ ಸೆಮಿಸ್ಟರ್‌ನ ಎಲ್ಲಾ ಸ್ನಾತಕ ಹಾಗೂ UUCMS ನ 1 ಮತ್ತು 2ನೇ ಸೆಮಿಸ್ಟರ್‌ನ ಸ್ನಾತಕೋತ್ತರ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲು ಅವಶ್ಯವಿರುವ ಲೆಡ್ಜರ್ ಶೀಟುಗಳನ್ನು ಖರೀದಿಸಲು ಪತ್ರಿಕಾ ಪ್ರಕಟಣೆ ನೀಡಿ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(1)/(10/23) |

# -:ಟಿಪ್ಪಣಿ:-

**ವಿಷಯಃ ಖಾಲಿ ಅಂಕಪಟ್ಟಿಗಳನ್ನು ಖರೀದಿಸುವ ಕುರಿತು.**

*****

NEP-2020 ರ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿದ ಎಲ್ಲಾ ಸೆಮಿಸ್ಟರ್‌ನ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಿಸಬೇಕಾಗಿರುತ್ತದೆ. ಆದ್ದರಿಂದ, ಖಾಲಿ ಅಂಕಪಟ್ಟಿಗಳನ್ನು ನಿಯಮಾನುಸಾರ ಖರೀದಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

**<u>ನಿರ್ಣಯ</u>**

NEP-2020 ರ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿದ ಎಲ್ಲಾ ಸ್ನಾತಕ ಹಾಗೂ UUCMS ನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಖಾಲಿ ಅಂಕಪಟ್ಟಿಗಳನ್ನು ಖರೀದಿಸುವ ಕುರಿತು ಸರ್ಕಾರದಿಂದ ಅನುಮೋದನೆ ಬಂದ ನಂತರ ಟೆಂಡರ್ ಕರೆದು ಖಾಲಿ ಅಂಕಪಟ್ಟಿಗಳನ್ನು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿ.06(m)/(10/23) |

## -:ಟಿಪ್ಪಣಿ:-

**ವಿಷಯ: ಲಾಜಿಸಿಸ್(ಸಾಫ್ಟ್‌ವೇರ್) ಮತ್ತು ಯುನಿಕ್ಲೇರ್ ಸಂಸ್ಥೆಯ ಸೇವೆಯನ್ನು ಮುಂದುವರೆಸುವ ಕುರಿತು.**

*****

ನವೆಂಬರ್/ ಡಿಸೆಂಬರ್-2018ರ ಮಾಹೆಯಲ್ಲಿ ಪರೀಕ್ಷಾ ತಂತ್ರಾಶಕ್ಕೆ ಸಂಬಂಧಿಸಿದ ಕಾರ್ಯಗಳಿಗಾಗಿ ನಿಯಮಾನುಸಾರ ಲಾಜಿಸಿಸ್(ಸಾಫ್ಟವೇರ್) ಮತ್ತು ಯುನಿಕ್ಲೇರ್ ಇವರ ಸಂಸ್ಥೆಯೊಂದಿಗೆ 5 ವರ್ಷಗಳ ಅವಧಿಯವರೆಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಆದರೆ, ಸದರಿ ಕರಾರು ಅವಧಿಯು ಅಕ್ಟೋಬರ್-2023ರ ಅಂತ್ಯಕ್ಕೆ ಮುಕ್ತಾಯಗೊಳ್ಳುತ್ತದೆ. ತದನಂತರದ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸುವ ಕ್ರಮದ ಕುರಿತು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಲಾಗಿದೆ.

### <u>ನಿರ್ಣಯ</u>

ನವೆಂಬರ್/ ಡಿಸೆಂಬರ್-2018ರ ಮಾಹೆಯಲ್ಲಿ ಪರೀಕ್ಷಾ ತಂತ್ರಾಶಕ್ಕೆ ಸಂಬಂಧಿಸಿದ ಕಾರ್ಯಗಳಿಗಾಗಿ ನಿಯಮಾನುಸಾರ ಲಾಜಿಸಿಸ್(ಸಾಫ್ಟವೇರ್) ಮತ್ತು ಯುನಿಕ್ಲೇರ್ ಇವರ ಸಂಸ್ಥೆಯೊಂದಿಗೆ 5 ವರ್ಷಗಳ ಅವಧಿಯವರೆಗೆ ಕರಾರು ಒಪ್ಪಂದ ಮಾಡಿಕೊಂಡಿದ್ದು, ಸದರಿ ಕರಾರು ಅವಧಿಯು ಅಕ್ಟೋಬರ್-2023ರ ಅಂತ್ಯಕ್ಕೆ ಮುಕ್ತಾಯಗೊಳ್ಳುತ್ತದೆ.

ಆದರೆ, ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಬೇಕಾಗಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಲಾಜಿಸಿಸ್(ಸಾಫ್ಟ್‌ವೇರ್) ಮತ್ತು ಯುನಿಕ್ಲೇರ್ ಸಂಸ್ಥೆಯ ಸೇವೆಯನ್ನು ಮುಂದುವರೆಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು                                        ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(n)/(10/23) |

## –:ಟಿಪ್ಪಣಿ:–

**ವಿಷಯ: ಖಾಲಿ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.**

*****

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ನಡೆಸಲಾಗುವ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸ್ನಾತಕ/ ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಬೇಕಾಗಿರುತ್ತದೆ. ಆದ್ದರಿಂದ, ನಿಯಮಾನುಸಾರ ಖಾಲಿ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸ್ನಾತಕ/ ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸುವ ಸಲುವಾಗಿ ದರಪಟ್ಟಿ ಕರೆದು ಖಾಲಿ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಗ್ರಂಥಾಲಯ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.07(a)/(10/23) |

## –:ಟಿಪ್ಪಣಿ:–

**ವಿಷಯ: ಗ್ರಂಥಾಲಯ ಸಲಹಾ ಸಮಿತಿಯ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*****

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:31.08.2023 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳು ಗ್ರಂಥಾಲಯದ ಅಭಿವೃದ್ಧಿ ಕುರಿತು ಚರ್ಚಿಸಿ ನಿರ್ಣಯಿಸಿದ ನಡಾವಳಿಗಳನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:31.08.2023 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ 08 ಅಂಶಗಳನ್ನೊಳಗೊಂಡ ನಡಾವಳಿಗಳ ಕುರಿತು ಚರ್ಚಿಸಿ ನಡಾವಳಿಗಳನ್ನು ಅನುಮೋದಿಸಿತು.

ಮುಂದುವರೆದು, ವಿಷಯ ಸಂಖ್ಯೆ:08ಕ್ಕೆ ಸಂಬಂಧಿಸಿದಂತೆ ನಡಾವಳಿಯಲ್ಲಿ ನಮೂದಿಸಿರುವ 04 ಅತಿಥಿ ಗ್ರಂಥಾಲಯ ಸಹಾಯಕರುಗಳಿಗೆ ನವೆಂಬರ್–2023 ರಿಂದ ಅನ್ವಯವಾಗುವಂತೆ ನೇಮಕ ಮಾಡಿಕೊಂಡು ಆದೇಶ ನೀಡಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ. ಘಟಕ | |
|---|---|
| ವಿಷಯ ಸಂಖ್ಯೆ: | ಸಿಂ.08(a)/(10/23) |

## –ಃಟಿಪ್ಪಣಿಃ–

**ವಿಷಯಃ ವಿಶ್ವವಿದ್ಯಾನಿಲಯದ ಬೋಧಕ ನೌಕರರ ನೇಮಕಾತಿ/ ಆಯ್ಕೆ ಹಾಗೂ ವೃತ್ತಿ ಪದೋನ್ನತಿಗೆ ಸಂಬಂಧಿಸಿದ ವಿಷಯ ತಜ್ಞರ ಪಟ್ಟಿಗೆ ಅನುಮೋದನೆ ಕುರಿತು.**

*****

ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳ ನೇಮಕಾತಿ/ ಆಯ್ಕೆ ಹಾಗೂ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸುವ ಕುರಿತು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳ ನೇಮಕಾತಿ/ ಆಯ್ಕೆ ಹಾಗೂ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ವಿಷಯ ತಜ್ಞರ ಪಟ್ಟಿಯನ್ನು ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರಿಗೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(a)/(10/23) |

## -:ಟಿಪ್ಪಣಿ:-

**ವಿಷಯ:** **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000ರ ಪ್ರಕಾರ ಟೆಂಡರ್ ಪ್ರಕ್ರಿಯೆಯನ್ನು ಮಾರ್ಪಡಿಸುವ ಬಗ್ಗೆ.**

**ಉಲ್ಲೇಖ:** ಕೆಟಿಪಿಪಿ ಅಧಿನಿಯಮ(ತಿದ್ದುಪಡಿ)ಅಧಿಸೂಸಂಖ್ಯೆ: ಸಂಖ್ಯೆ:ಕಾ.ಇ25 ಶಾಸನ2019 ದಿನಾಂಕ:27-04-2020

*****

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000ರ ದಿನಾಂಕ:04-10-2000 ರಿಂದ ಜಾರಿಗೆ ಬಂದಿರುತ್ತದೆ. ಸದರಿ ಕಾಯ್ದೆ/ ನಿಯಮ ಪ್ರಕಾರ ಒಂದು ಲಕ್ಷ ಮೌಲ್ಯಕ್ಕೂ ಮೇಲ್ಪಟ್ಟ ಸಾಮಾಗ್ರಿಗಳ ಖರೀದಿ ಹಾಗೂ ಸೇವೆಗಳ ಕುರಿತು ಇ-ಟೆಂಡರ್/ Manual Tender ಪ್ರಕ್ರಿಯೆ ಮೂಲಕ ನಿರ್ವಹಿಸಬೇಕಾಗಿರುವುದನ್ನು ಉಲ್ಲೇಖಿತ-1ರ ಸರ್ಕಾರದ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ.

In the Karnataka Transparency in public procurements Act, 1999 (Karnataka Act 29 of 2000) in section 4, in clause (e):-

(i) In sub-clause (i) for the words “Construction works and consultancy services” the words “**Goods and services including construction works and consultancy services**” shall be substituted ; and

(ii) Sub- clause (ii) shall be omitted.

ಈ ಹಿನ್ನಲೆಯಲ್ಲಿ ಇನ್ನು ಮುಂದೆ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000ರ ಅನ್ವಯ ಐದು ಲಕ್ಷ ಮೌಲ್ಯಕ್ಕೂ ಮೇಲ್ಪಟ್ಟ ಸಾಮಾಗ್ರಿಗಳ ಖರೀದಿ ಹಾಗೂ ಸೇವೆಗಳ ಕುರಿತು ಇ-ಟೆಂಡರ್ ಪ್ರಕ್ರಿಯೆ ಮೂಲಕ ಕ್ರಮ ವಹಿಸಬೇಕಾಗಿರುತ್ತದೆ.

ಮೇಲ್ಕಂಡಂತೆ ಐದು ಲಕ್ಷದ ಕೆಳಪಟ್ಟ ಕಛೇರಿ ಉಪಕರಣಗಳು/ಸಾಧನ ಸಾಮಾಗ್ರಿಗಳು/ನಿರ್ವಹಣೆ/ವಿದ್ಯುತ್/ಪ್ಲಂಬಿಂಗ್ ಸಾಮಗ್ರಿಗಳ ದುರಸ್ತಿ/ಖರೀದಿ ಸೇವೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000ರ ಅನ್ವಯ ಸ್ಥಳಿಯ ಸಂಸ್ಥೆಗಳಿಂದ ದರಪಟ್ಟಿಗಳನ್ನು ಪಡೆಯುವ ಆಧಾರದ ಮೇಲೆ ಕ್ರಮಕೈಗೊಳ್ಳಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

### ನಿರ್ಣಯ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000ರನ್ವಯ ಹಾಗೂ ಸರ್ಕಾರದ ಅಧಿಸೂಚನೆಯಂತೆ ವಿಶ್ವವಿದ್ಯಾನಿಲಯದ ಕಛೇರಿ ಉಪಕರಣಗಳು/ ಸಾಧನ ಸಾಮಾಗ್ರಿಗಳು/ ನಿರ್ವಹಣೆ/ ದುರಸ್ತಿ/ ಖರೀದಿ ಹಾಗೂ ಸೇವೆಗಳ ಟೆಂಡರ್‌ನ್ನು ಒಂದು ಲಕ್ಷದ ಬದಲಾಗಿ ಐದು ಲಕ್ಷದವರೆಗೆ ದರಪಟ್ಟಿ ಕರೆದು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(b)/(10/23) |

# –:ಟಿಪ್ಪಣಿ:–

**ವಿಷಯಃ ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ ಕಛೇರಿಗಳಿಗೆ ಶುದ್ಧ ಕುಡಿಯುವ ನೀರಿಗಾಗಿ ಅಕ್ವಗಾರ್ಡ್ ಖರೀದಿಸಲು ಅನುಮೋದನೆ ಕುರಿತು.**

*****

ವಿಶ್ವವಿದ್ಯಾನಿಲಯದ ಆಡಳಿತ ವಿಭಾಗ, ಪರೀಕ್ಷಾಂಗ ವಿಭಾಗ ಹಾಗೂ ಹಣಕಾಸು ವಿಭಾಗದಲ್ಲಿ ಕಾರ್ಯನಿರ್ವಹಿಸುವ ಕಛೇರಿ ಸಿಬ್ಬಂದಿಗಳಿಗೆ ಶುದ್ಧ ಕುಡಿಯುವ ನೀರಿಗಾಗಿ 100 ಲೀಟರ್ ಸಾಮರ್ಥ್ಯವುಳ್ಳ 03 ಅಕ್ವಗಾರ್ಡ್‌ಗಳನ್ನು ದರಪಟ್ಟಿ ಮೂಲಕ ನಿಯಮಾನುಸಾರ ಖರೀದಿಸಲು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ ಆಡಳಿತ ವಿಭಾಗ, ಪರೀಕ್ಷಾಂಗ ವಿಭಾಗ ಹಾಗೂ ಹಣಕಾಸು ವಿಭಾಗದಲ್ಲಿ ಕಾರ್ಯನಿರ್ವಹಿಸುವ ಕಛೇರಿ ಸಿಬ್ಬಂದಿಗಳಿಗೆ ಶುದ್ಧ ಕುಡಿಯುವ ನೀರಿಗಾಗಿ 100 ಲೀಟರ್ ಸಾಮರ್ಥ್ಯವುಳ್ಳ 03 ಅಕ್ವಗಾರ್ಡ್‌ಗಳನ್ನು ದರಪಟ್ಟಿ ಮೂಲಕ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(c)/(10/23) |

**-:ಟಿಪ್ಪಣಿ:-**

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯ ಆವರಣ ಹಾಗೂ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗದಲ್ಲಿ ಕೊಳವೆ ಬಾವಿ ಮೋಟಾರ್/ಪಂಪ್‌ಗಳ ನಿರ್ವಹಣೆ ದುರಸ್ತಿಗೆ ದರ ಒಪ್ಪಂದ ಮಾಡಿಕೊಳ್ಳುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 7 ಬೋರವೆಲ್‌ಗಳು, ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯ ಆವರಣದಲ್ಲಿ 1 ಹಾಗೂ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗದಲ್ಲಿ 1 ಬೋರವೆಲ್‌ಗಳಿರುತ್ತವೆ. ಈ ಬೋರವೆಲ್ ಮೋಟಾರ್/ಪಂಪ್‌ಗಳು ಪದೇ ಪದೇ ರಿಪೇರಿ ಬರುವುದರಿಂದ ಅವುಗಳ ನಿರ್ವಹಣೆ ಮತ್ತು ದುರಸ್ತಿಗೆ ದರ ಒಪ್ಪಂದ ಮಾಡಿಕೊಳ್ಳುವ ಅವಶ್ಯಕತೆ ಇದ್ದು, ಅದರ ಅಂದಾಜು ಮೊತ್ತ ರೂ. 3.00 ಲಕ್ಷ ಆಗುವುದರಿಂದ, ಸದರಿ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

<u>ನಿರ್ಣಯ</u>

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 7 ಬೋರವೆಲ್‌ಗಳು, ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯ ಆವರಣದಲ್ಲಿ 1 ಹಾಗೂ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗದಲ್ಲಿ 1 ಬೋರವೆಲ್ ಮೋಟಾರ್/ ಪಂಪ್‌ಗಳ ನಿರ್ವಹಣೆ ಮತ್ತು ದುರಸ್ತಿಗೆ ಅಂದಾಜು ಮೊತ್ತ ರೂ.3.00 ಲಕ್ಷದೊಳಗೆ ನಿಯಮಾನುಸಾರ ವಾರ್ಷಿಕ ನಿರ್ವಹಣೆಗೆ ದರಪಟ್ಟಿ ಕರೆದು AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(d)/(10/23) |

# -:ಟಿಪ್ಪಣಿ:-

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಪುರುಷ ವಸತಿನಿಲಯಗಳ ಬೋರವೆಲ್ Submersible Motor ಗಳಿಗೆ flat cable ಗಳನ್ನು ಖರೀದಿಸುವುದು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ 3 ಪುರುಷ ವಸತಿನಿಲಯಗಳಿಗೆ ನೀರು ಸರಬರಾಜು ಮಾಡುವ ಬೋರ್‌ವೆಲ್ Motor ಗಳಿಗೆ 14 ವರ್ಷಗಳಷ್ಟು ಹಳೆಯದಾದ Service Cable ಇರುತ್ತದೆ ಹಾಗೂ Cable ನ್ನು ರಸ್ತೆಯ ಮೇಲ್ಭಾಗದಲ್ಲಿ ಗಿಡಗಳಿಗೆ ಕಟ್ಟಲಾಗಿರುತ್ತದೆ. ಇದರಿಂದಾಗಿ ಪದೆ ಪದೇ Cable Short Circuit ಆಗಿ ಸುಟ್ಟುಹೊಗುತ್ತಿರುತ್ತದೆ ಹಾಗೂ ಬೋರ್‌ವೆಲ್ Starter Panel ನಿಂದ Borewell Motor ಬಹಳಷ್ಟು ದೂರ ಇರುತ್ತದೆ. ಆದ್ದರಿಂದ, ಬ್ರಹ್ಮಪುತ್ರ & ಪುರುಷ ವಸತಿನಿಲಯಗಳಿಗೆ ನೀರು ಸರಬರಾಜು ಮಾಡುವ ಬೋರ್‌ವೆಲ್ ಮೋಟಾರ್‌ಗೆ & ಭದ್ರ ಪುರುಷ ವಸತಿ ನಿಲಯಕ್ಕೆ ನೀರು ಸರಬರಾಜು ಮಾಡುವ ಬೋರ್‌ವೆಲ್ ಮೋಟಾರ್‌ಗೆ ಹೊಸದಾಗಿ Flat Cable ಖರೀದಿಸುವ ಅವಶ್ಯಕತೆ ಇರುತ್ತದೆ. ಇದರ ಅಂದಾಜು ಮೊತ್ತ ರೂ. 5.00 ಲಕ್ಷ ಆಗುವುದರಿಂದ, ಸದರಿ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಬ್ರಹ್ಮಪುತ್ರ & ಪುರುಷ ವಸತಿ ನಿಲಯಗಳಿಗೆ ನೀರು ಸರಬರಾಜು ಮಾಡುವ ಬೋರ್‌ವೆಲ್ ಮೋಟಾರ್‌ಗೆ ಮತ್ತು ಭದ್ರ ಪುರುಷ ವಸತಿ ನಿಲಯಕ್ಕೆ ನೀರು ಸರಬರಾಜು ಮಾಡುವ ಬೋರ್‌ವೆಲ್ ಮೋಟಾರ್‌ಗೆ ಹೊಸದಾಗಿ Flat Cable ಖರೀದಿಸಲು ದರಪಟ್ಟಿ ಕರೆದು ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(e)/(10/23) |

**–ಃಟಿಪ್ಪಣಿಃ–**

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ Printer ಗಳನ್ನು AMC ನೀಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಕಛೇರಿ ಹಾಗೂ ವಿಭಾಗಗಳಲ್ಲಿರುವ Printer ಗಳನ್ನು ರಿಪೇರಿ/ ನಿರ್ವಹಣೆ ಮಾಡಲು AMC ನೀಡುವ ಅವಶ್ಯಕತೆ ಇರುತ್ತದೆ. ಇದರ ಅಂದಾಜು ಮೊತ್ತ ರೂ.5.00 ಲಕ್ಷ ಆಗುವುದರಿಂದ, ಸದರಿ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

**ನಿರ್ಣಯ**

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಕಛೇರಿ ಹಾಗೂ ವಿಭಾಗಗಳಲ್ಲಿರುವ Printer ಗಳನ್ನು ವಾರ್ಷಿಕ ನಿರ್ವಹಣೆ ಮಾಡಲು ತಾಂತ್ರಿಕ ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ವರದಿ ನೀಡಿದ ನಂತರ ದರಪಟ್ಟಿ ಕರೆದು ನಿಯಮಾನುಸಾರ AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(f)/(10/23) |

## -:ಟಿಪ್ಪಣಿ:-

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದ ಆಡಳಿತ ಭವನದಲ್ಲಿರುವ Desktop Computer ಗಳನ್ನು AMC ನೀಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಕಛೇರಿ ಹಾಗೂ ವಿಭಾಗಗಳಲ್ಲಿರುವ Desktop Computer ಗಳನ್ನು ರಿಪೇರಿ/ ನಿರ್ವಹಣೆ ಮಾಡಲು AMC ನೀಡುವ ಅವಶ್ಯಕತೆ ಇರುತ್ತದೆ. ಇದರ ಅಂದಾಜು ಮೊತ್ತ ರೂ.5.00 ಲಕ್ಷ ಆಗುವುದರಿಂದ, ಸದರಿ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

**ನಿರ್ಣಯ**

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಕಛೇರಿ ಹಾಗೂ ವಿಭಾಗಗಳಲ್ಲಿರುವ Desktop Computer ಗಳನ್ನು ವಾರ್ಷಿಕ ನಿರ್ವಹಣೆ ಮಾಡಲು ತಾಂತ್ರಿಕ ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ವರದಿ ನೀಡಿದ ನಂತರ ದರಪಟ್ಟಿ ಕರೆದು AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(g)/(10/23) |

# –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದ ಅಂಗವಿಕಲರ ಕಲ್ಯಾಣ ಘಟಕಕ್ಕೆ Aluminium partition ಮಾಡಿಸಲು ಟೆಂಡರ್ ಕರೆಯುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ದಾವಣಗೆರೆ ವಿಶ್ವವಿದ್ಯಾನಿಲಯದ ಅಂಗವಿಕಲರ ಕಲ್ಯಾಣ ಘಟಕಕ್ಕೆ Aluminium partition ಮಾಡಿಸುವ ಅವಶ್ಯಕತೆ ಇರುತ್ತದೆ. ಇದರ ಅಂದಾಜು ಮೊತ್ತ ರೂ.3.00 ಲಕ್ಷ ಆಗುವುದರಿಂದ, ಸದರಿ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

## <u>ನಿರ್ಣಯ</u>

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ಅಂಗವಿಕಲರ ಕಲ್ಯಾಣ ಘಟಕಕ್ಕೆ ಅಂದಾಜು ಮೊತ್ತ ರೂ.3.00 ಲಕ್ಷದೊಳಗೆ ನಿಯಮಾನುಸಾರ ದರಪಟ್ಟಿ ಕರೆದು Aluminium partition ಮಾಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(h)/(10/23) |

## -:ಟಿಪ್ಪಣಿ:-

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ Xerox machine ಗಳನ್ನು AMC ನೀಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ ಆಡಳಿತ ವಿಭಾಗ, ಹಣಕಾಸು ವಿಭಾಗ ಹಾಗೂ ಪರೀಕ್ಷಾಂಗ ವಿಭಾಗಗಳಲ್ಲಿರುವ Xerox Machine ಗಳನ್ನು AMC ನೀಡುವ ಅವಶ್ಯಕತೆ ಇರುತ್ತದೆ. ಇದರ ಅಂದಾಜು ಮೊತ್ತ:5.00 ಲಕ್ಷ ಆಗುವುದರಿಂದ, ಸದರಿ ವಿಷಯವನ್ನು ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ ಆಡಳಿತ ವಿಭಾಗ, ಹಣಕಾಸು ವಿಭಾಗ ಹಾಗೂ ಪರೀಕ್ಷಾಂಗ ವಿಭಾಗಗಳಲ್ಲಿರುವ Xerox Machine ಗಳನ್ನು ವಾರ್ಷಿಕ ನಿರ್ವಹಣೆ ಮಾಡಲು ತಾಂತ್ರಿಕ ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ವರದಿ ನೀಡಿದ ನಂತರ ದರಪಟ್ಟಿ ಕರೆದು ನಿಯಮಾನುಸಾರ AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(i)/(10/23) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಆಡಳಿತ ಭವನದಲ್ಲಿರುವ ಹಣಕಾಸು ವಿಭಾಗದ 30KVA ಸಾಮರ್ಥ್ಯದ UPSಗೆ 30 ಸಂಖ್ಯೆ Battery ಗಳನ್ನು ಖರೀದಿಸುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯದ ಆಡಳಿತ ಭವನದ ಹಣಕಾಸು ವಿಭಾಗದ 30 KVA UPS ಗೆ ಸಂಬಂಧಿಸಿದ 30 ಸಂಖ್ಯೆ Battery ಗಳನ್ನು ಅಳವಡಿಸಿ 7 ವರ್ಷ ಆಗಿದ್ದು, ಈಗ ಹಾಳಾಗಿದ್ದು ಹೊಸದಾಗಿ Battery ಗಳನ್ನು ಖರೀದಿಸಬೇಕಾಗಿರುತ್ತದೆ. ದಿನಾಂಕ:07.10.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

<u>ನಿರ್ಣಯ</u>

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಹಣಕಾಸು ವಿಭಾಗದಲ್ಲಿ 30KVA UPS & Battery ಗಳನ್ನು ಅಳವಡಿಸಿದ್ದು, ಈಗ Battery ಗಳು 7 ವರ್ಷಗಳಷ್ಟು ಹಳೆಯದಾಗಿರುವುದರಿಂದ 30 ಸಂಖ್ಯೆ Battery ಗಳನ್ನು ಹೊಸದಾಗಿ Buy Back ನಲ್ಲಿ ದರಪಟ್ಟಿ ಕರೆದು ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(c)/(10/23) |

## -:ಟಿಪ್ಪಣಿ:-

**ವಿಷಯ: ಶ್ರೀಮತಿ ಶಾರದಾ ಪಾಟೀಲ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಂಡಿಸಿರುವ ವಿಷಯದ ಕುರಿತು.**

*****

| | |
|---|---|
| **ವಿಷಯ: 1** | ಸಂಯೋಜನಾ ಸಮಿತಿಗೆ ಸಿಂಡಿಕೇಟ್ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಿಸುವ ಕುರಿತು. |
| ನಿರ್ಣಯ | ವಿಶ್ವವಿದ್ಯಾನಿಲಯದ ಸಂಯೋಜನಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರುಗಳನ್ನು ಅಧ್ಯಕ್ಷರು/ ಸದಸ್ಯರನ್ನಾಗಿ ನೇಮಿಸುವ ಸಲುವಾಗಿ ಸರ್ಕಾರಕ್ಕೆ ಪತ್ರಿಸಲು ಸಭೆಯು ತೀರ್ಮಾನಿಸಿತು. |
| **ವಿಷಯ: 2** | ಸಂಶೋಧನಾ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಒದಗಿಸುವ ಕುರಿತು. |
| ನಿರ್ಣಯ | ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನ ಪರಿಷ್ಕರಣೆ, ಲ್ಯಾಪ್‌ಟಾಪ್ ವಿತರಣೆ, ವಿದ್ಯಾರ್ಥಿಗಳಿಗೆ ಪ್ರತ್ಯೇಕ ಉಚಿತ ಕೊಠಡಿ, ಸಂಶೋಧನಾರ್ಥಿಗಳ ಲೇಖನಗಳನ್ನು ಉಚಿತವಾಗಿ ಪ್ರಕಟಿಸಲು ಪ್ರಸಾರಾಂಗ ವ್ಯವಸ್ಥೆ ಹಾಗೂ ವಿಜ್ಞಾನ ಹಾಗೂ ಭಾಷಾ ವಿಷಯ ವಿಭಾಗಗಳಿಗೆ ಸುಸಜ್ಜಿತ ಪ್ರಯೋಗಾಲಯದ ವ್ಯವಸ್ಥೆಗಳಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಕಲ್ಪಿಸುವ ಸಲುವಾಗಿ ಸರ್ಕಾರಕ್ಕೆ ಪತ್ರಿಸಲು ಸಭೆಯು ನಿರ್ಣಯಿಸಿತು. |

## -:ಟಿಪ್ಪಣಿ:-

**ವಿಷಯ: ಕು. ಗೀತಾ ಜಿ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಮಂಡಿಸಿರುವ ವಿಷಯದ ಕುರಿತು.**

*****

| | |
|---|---|
| ವಿಷಯ: 1 | ಸಂಯೋಜನಾ ಸಮಿತಿಗೆ ಸಿಂಡಿಕೇಟ್ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಿಸುವ ಕುರಿತು. |
| ನಿರ್ಣಯ | ವಿಶ್ವವಿದ್ಯಾನಿಲಯದ ಸಂಯೋಜನಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರುಗಳನ್ನು ಅಧ್ಯಕ್ಷರು/ ಸದಸ್ಯರನ್ನಾಗಿ ನೇಮಿಸುವ ಸಲುವಾಗಿ ಸರ್ಕಾರಕ್ಕೆ ಪತ್ರಿಸಲು ಸಭೆಯು ತೀರ್ಮಾನಿಸಿತು. |

ಕೊನೆಯಲ್ಲಿ ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು